# ಪ್ರೊಫೆಸರ್ ಎಡ್‌ಮಂಡ್ ಜೆ.ಬಿ. ಫ್ರಾಂಕ್‌ರವರ ಕೃತಿ: 'ದೇವರ ಸೇವಕ ರೇಮಂಡ್ ಎಫ್.ಸಿ. ಮಸ್ಕರೇನ್ಹಸ್ ಅವರ ಜೀವನ ಚಿತ್ರಣ'

ಪ್ರೇಮಲತಾ[1] & ರಾಜಶೇಖರ ಜಮ್ಮದಂಡಿ[2]

[1]ಸಂಶೋಧನಾ ವಿದ್ಯಾರ್ಥಿ, ಸಮಾಜ ವಿಜ್ಞಾನ ಮತ್ತು ಮಾನವಿಕ ವಿಭಾಗ, ಶ್ರೀನಿವಾಸ ವಿಶ್ವವಿದ್ಯಾಲಯ, ಪಾಂಡೇಶ್ವರ, ಮಂಗಳೂರು.

[2]ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು, ಸಮಾಜ ವಿಜ್ಞಾನ ಮತ್ತು ಮಾನವಿಕ ವಿಭಾಗ, ಶ್ರೀನಿವಾಸ ವಿಶ್ವವಿದ್ಯಾಲಯ, ಪಾಂಡೇಶ್ವರ, ಮಂಗಳೂರು.

DOI: https://doi.org/10.5281/zenodo.18770573

## ABSTRACT:

ಪ್ರೊಫೆಸರ್ ಎಡ್‌ಮಂಡ್ ಜೆ.ಬಿ. ಫ್ರಾಂಕ್ ಅವರು ರಚಿಸಿದ 'ದೇವರ ಸೇವಕ ರೇಮಂಡ್ ಎಫ್.ಸಿ. ಮಸ್ಕರೇನ್ಹಸ್ ಅವರ ಜೀವನ ಚಿತ್ರಣ' ಕೃತಿಯು ಓದುಗರಿಗೆ ಒಬ್ಬ ಮಹಾನ್ ಚೇತನದ ಸಮಗ್ರ ಹಾಗೂ ಸಾಕ್ಷ್ಯಾಧಾರಿತ ಪರಿಚಯವನ್ನು ಮಾಡಿಕೊಡುತ್ತದೆ. ಕೊಂಕಣಿ ಕಥೋಲಿಕರ ವಲಸೆ, ಟಿಪ್ಪು ಸುಲ್ತಾನನ ಕಾಲದ ಸೆರೆಯಾಳು ಜೀವನ ಮತ್ತು ಮಸ್ಕರೇನ್ಹಸ್ ಕುಟುಂಬದ ಐತಿಹಾಸಿಕ ಹಿನ್ನೆಲೆಯನ್ನು ಇದು ಒಳಗೊಂಡಿದೆ. ಬೆಂದೂರು ಧರ್ಮಕೇಂದ್ರದ ಗುರುವಿನಿಂದ ಮಂಗಳೂರು ಧರ್ಮಕ್ಷೇತ್ರದ ವಿಕರ್ ಜನರಲ್ ಹುದ್ದೆಯವರೆಗಿನ ರೇಮಂಡರ ಪಯಣ, ಬೆಥನಿ ಸಂಸ್ಥೆಯ ಸ್ಥಾಪನೆ ಮತ್ತು ಸ್ತ್ರೀ ಶಿಕ್ಷಣಕ್ಕಾಗಿ ಅವರು ಕೈಗೊಂಡ ಕ್ರಾಂತಿಕಾರಕ ನಿರ್ಧಾರಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಶೈಕ್ಷಣಿಕ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಅವರು ನೀಡಿದ ಕೊಡುಗೆ, ಬಡವರ ಏಳಿಗೆಗಾಗಿ ಪಟ್ಟ ಶ್ರಮ ಹಾಗೂ ಅವರ ಸಂತರ ಪದವಿಯ ಪ್ರಕ್ರಿಯೆಯನ್ನು ಈ ವಿಮರ್ಶೆಯು ಅನಾವರಣಗೊಳಿಸುತ್ತದೆ.

## KEYWORDS:

ರೇಮಂಡ್ ಎಫ್.ಸಿ. ಮಸ್ಕರೇನ್ಹಸ್, ಬೆಥನಿ ಸಂಸ್ಥೆ, ಸಮಾಜ ಸುಧಾರಣೆ, ಮಂಗಳೂರು ಕಥೋಲಿಕರು, ಸ್ತ್ರೀ ಶಿಕ್ಷಣ.

**ಪೀಠಿಕೆ:**

ಪೂಜ್ಯ ದೇವರ ಸೇವಕ ರೇಮಂಡ್ ಎಫ್.ಸಿ. ಮಸ್ಕರೇನ್ಹಸ್‌ರವರು ತೀರಿಹೋದ 61 ವರ್ಷಗಳ ನಂತರ ಅವರ (ವ್ಯಕ್ತಿ ಮತ್ತು ಘಟನೆಗಳನ್ನು) ಕುರಿತು ಅಧ್ಯಯನ ಮಾಡಿ ಈ ಕೃತಿಯನ್ನು ಅರ್ಥಪೂರ್ಣ ಮತ್ತು ತಾರ್ಕಿಕ ಬದ್ಧವಾಗಿ ಲೇಖಕರು ಬರೆಯಲು ಪ್ರಯತ್ನಿಸಿದ್ದಾರೆ ಅನ್ನಿಸುತ್ತದೆ. ಇದರಲ್ಲಿ ಪೂಜ್ಯರ ಹಿನ್ನೆಲೆ, ಹುಟ್ಟು, ಬಾಲ್ಯ, ಸೇವೆ, ಜೀವನ, ಸಾಧನೆ ಮುಂತಾದವುಗಳನ್ನು ಸಾಕ್ಷಿ ಆಧಾರದ ಮೇಲೆ ಸಾಬೀತು ಮಾಡಿರುವುದಲ್ಲದೆ ಆಕರ್ಷಕ ಭಾವಚಿತ್ರಗಳ ಮೂಲಕ ಅನಾವರಣಗೊಳಿಸಿದ್ದಾರೆ.

ರೇಮಂಡ್ ಮಸ್ಕರೇನ್ಹಸ್‌ರವರ ಪ್ರೌಢಶಾಲೆಯ ವಿದ್ಯಾಭ್ಯಾಸ, ಧಾರ್ಮಿಕ, ಸಾಮಾಜಿಕ ಜೀವನ ಮತ್ತು ಬೆಂದೂರಿನ ಧರ್ಮಗುರುವಾಗಿ ನಡೆಸಿದ ಜೀವನವನ್ನು ಲೇಖಕರು ಚಿತ್ರೀಕರಿಸಿದ್ದಾರೆ. ಧರ್ಮಕೇಂದ್ರದ ಗುರುವಾಗಿ ನೇಮಕಗೊಂಡ ಆರಂಭದ ಯುಗದಿಂದ ಅವರು ಧರ್ಮಕ್ಷೇತ್ರದ ವಿಕರ್ ಜನರಲ್ ಆಗಿ ನೇಮಕಗೊಳ್ಳುವವರೆಗೆ ಸಮರ್ಪಕವಾಗಿ ಅಧ್ಯಯನ ಮಾಡಿ ದಾಖಲೆಗಳ ಮೂಲಕ ರೇಮಂಡರು ಹುಟ್ಟುಹಾಕಿದ ಪರಂಪರೆಯನ್ನು ಸ್ಪಷ್ಟಪಡಿಸಿದ್ದಾರೆ.

ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳ ಮುಖಾಂತರ ಮೊದಲ ಕೆಲವು ಅಧ್ಯಾಯಗಳಲ್ಲಿ ರೇಮಂಡರ ಬಾಲ್ಯದ ದಿನಗಳು, ರೇಮಂಡರ ವ್ಯಕ್ತಿತ್ವ ಮತ್ತು ಭವಿಷ್ಯವನ್ನು ರೂಪಿಸುವಲ್ಲಿ ತಾಯಿಯ ಪಾತ್ರ, ಅವರ ಶಾಲಾ ದಿನಗಳು, ಸೆಮಿನರಿ ಜೀವನ, ಬೆಂದೂರಿನ ಧರ್ಮಕೇಂದ್ರವನ್ನು ರೂಪಿಸುವಲ್ಲಿ ಅವರ ಕಾರ್ಯ ಮತ್ತು ಸುವರ್ಣಾಕ್ಷರಗಳಲ್ಲಿ ದಾಖಲಿಸಬಹುದಾದ ಅವರ ನೆಚ್ಚಿನ 'ಸಂತೋಷ ಮತ್ತು ಕಿರೀಟ'ವಾದ 'ಕಿರುಪುಷ್ಪ ಸಂತ ತೆರೇಸರ ಬೆಥನಿ ಭಗಿನಿಯರು' (Sisters of the Little Flower of Bethany), ವಿಕರ್ ಜನರಲ್ ಆಗಿ ಅವರ ಕಾರ್ಯ, ಸಮಾಜದ ರೂಪಾಂತರಕ್ಕಾಗಿ ಮಾಡಿದ ಸೇವಾಕಾರ್ಯಗಳು, ದೈವಯೋಜನೆಯನ್ನು ಬೆಥನಿ ಸಿಸ್ಟರ್ಸ್‌ರವರ ಮೂಲಕ ಮುಂದುವರಿಕೆ, ಅವರ ಕಷ್ಟ ಸಂಕಟದ ಮತ್ತು ಅವರ ಪರೀಕ್ಷಾ ದಿನಗಳಲ್ಲಿ ಲೋಕಜೀವಿತದ ಅಂತ್ಯ, ಸಂತರ ಪದವಿಯ ಘೋಷಣೆಯತ್ತ ಪಯಣ (Beatification and Canonization in the Sacred Congregation) ಇತ್ಯಾದಿಗಳನ್ನು ಇಲ್ಲಿ ಕೂಲಂಕಷವಾಗಿ ಲೇಖಕರು ಬರೆದಿದ್ದಾರೆ. ಹೀಗೆ ಹಿರಿಯ ಮತ್ತು ಕಿರಿಯ ಓದುಗರಿಗೆ ದೇವರ ಸೇವಕ ರೇಮಂಡರ ಕುರಿತು ತಿಳಿಯಲು ತುಂಬಾ ಪ್ರಶಸ್ತವಾದ ಕೃತಿಯಾಗಿದೆ.

**ಜೀವನ ಚಿತ್ರಣ:**

ರೇಮಂಡರ ಬದುಕು ಓದುಗರಲ್ಲಿ ಕ್ರಾಂತಿಕಾರಕ ಹಾಗೂ ದೂರದೃಷ್ಟಿಯ ಚಿಂತನೆಗಳನ್ನು ತಿಳಿಯುವಲ್ಲಿ ಸಹಕಾರಿಯಾಗಿದೆ. ಅವರ ಅನುಭವದ ಬದುಕು ಸರ್ವರಿಗೂ ಮಾದರಿ ಹಾಗೂ ಸ್ಫೂರ್ತಿ.

1. ವಲಸೆ ಮತ್ತು ಸೆರೆಯಾಳಾಗಿ ಮಸ್ಕರೇನ್ಹಸ್ ಕುಟುಂಬ.
2. ಮಂಗಳೂರಿನ ಕುಡಿ – ಶಿವಮೊಗ್ಗದ ಮಗನಾಗಿ.
3. ತಾಯಿ ಜೊಹಾನ್ನಳ ಪ್ರೀತಿಯ ಹಾರೈಕೆ.
4. 1 ರಿಂದ ಮೆಟ್ರಿಕ್ಯುಲೇಷನ್ ವಿದ್ಯಾಭ್ಯಾಸ (1880–1890).
5. ಸೆಮಿನರಿ ಜೀವನದಿಂದ ಯಾಜಕಾಭಿಷೇಕದವರೆಗೆ (1891–1900).
6. ಬೆಥನಿ ಸಂಸ್ಥೆಯ ಸ್ಥಾಪನೆ – ದೈವಾಧೀನರಾಗುವ ತನಕ.
7. ಬೆಂದೂರು ಧರ್ಮಕೇಂದ್ರ – ಬೆಥನಿಯ ತೊಟ್ಟಿಲು.
8. ವಿಕರ್ ಜನರಲ್ ಆಗಿ ಮಂಗಳೂರು ಧರ್ಮಕ್ಷೇತ್ರದ ಸೇವೆ.
9. ವೃತ್ತಿಜೀವನದ ನಂತರದ ಮಹಾತ್ಯಾಗದ ಸಾಧನೆಗಳು.
10. ಸಮಾಜ ರೂಪಾಂತರದಲ್ಲಿ ಆಧಾರದ ಸ್ತಂಭ.
11. ಜುಬಿಲಿ ಸಂಭ್ರಮ ಆಚರಣೆ.
12. ಯಾತನಾಮಯ ಸಂಧ್ಯಾ ವರ್ಷಗಳು (1955–1960) ವಿಶ್ವಾಸ ಮತ್ತು ಭರವಸೆಯಿಂದ ಹೆಜ್ಜೆ.
13. ಬೆಥನಿ ಸಂಸ್ಥೆಯ ಸಂಸ್ಥಾಪಕರಾಗಿ ದೈವಕೃಪೆಯ ಪ್ರತಿಫಲನ.
14. ದೇವರ ಸೇವಕ ಮೊ। ರೇಮಂಡ್ ಮಸ್ಕರೇನ್ಹಸ್‌ರವರ ಸಂತರ ಪದವಿಯ (Beatification and Canonization) ಕಾರ್ಯಕ್ಕೆ ಅನುಮೋದನೆ.

ಲೇಖಕರು ಈ ರೀತಿಯಾಗಿ ಅವರ ಇಡೀ ಜೀವನದ ಪಯಣವನ್ನು ವಿಭಾಗಿಸಿರುವುದರಿಂದ ಓದುಗರಿಗೆ ಬಹಳ ಸುಲಭವೆನಿಸುತ್ತದೆ. ಕೃತಿಯನ್ನು ಓದುತ್ತಿದ್ದರೆ, ನಿಜಕ್ಕೂ ಪೂಜ್ಯ ರೇಮಂಡ್ ಎಫ್.ಸಿ. ಮಸ್ಕರೇನ್ಹಸ್‌ರವರ ಸಂಪೂರ್ಣ ಜೀವನ ಚಲನಚಿತ್ರದಂತೆ ಕಣ್ಣಿಗೆ ಕಟ್ಟುತ್ತದೆ, ಮೈ ಮನ ಪುಳಕಿತವಾಗುತ್ತದೆ, ಹೃದಯಂಗಮವಾಗಿ ಸ್ಫೂರ್ತಿ ಒಡಮೂಡುತ್ತದೆ ಮತ್ತು ಓದುಗರನ್ನು ಜಾಗೃತಗೊಳಿಸುತ್ತದೆ. ಒಟ್ಟಾರೆಯಾಗಿ ರೇಮಂಡರು ಒಬ್ಬ ಅನುಭಾವದ ಮತ್ತು ಸಮಾಜ ರೂಪಾಂತರದ ಚೇತನಶಾಲಿಯಾಗಿದ್ದಾರೆ.

ಮೊದಲ ಅಧ್ಯಾಯದಲ್ಲಿ 'ವಲಸೆ ಮತ್ತು ಸೆರೆಯಾಳಾಗಿ' ಎಂಬ ಶೀರ್ಷಿಕೆಯಡಿ ಮಂಗಳೂರಿನ ರೋಮನ್ ಕ್ಯಾಥೋಲಿಕರ ಮೂಲವನ್ನು ತಿಳಿಸಲಾಗಿದೆ. ಆ ಕುರಿತು ಸಂಶೋಧನೆ ನಡೆಸಿದ ಸಿಸಿ ಎಂಬಿ (CCMB) ವಿಜ್ಞಾನಿ ಹಾಗೂ ಫಿಂಗರ್ ಪ್ರಿಂಟಿಂಗ್ ಮತ್ತು ರೋಗ ನಿರ್ಣಯ ಕೇಂದ್ರ ಹೈದರಾಬಾದ್ ನಿರ್ದೇಶಕರಾದ ಡಾ. ಕುಮಾರಸ್ವಾಮಿ ಥಾಂಗರಾಜ್, ಕೋಶೀಯ ಮತ್ತು ಆಣ್ವಿಕ ಜೀವಶಾಸ್ತ್ರ ಕೇಂದ್ರ

ಹೈದರಾಬಾದಿನ ನಿರ್ದೇಶಕರಾದ ಡಾ. ವಿನಯ್ ಕೆ. ನಂದಿಕೋರಿ ಮುಂತಾದವರು ನಡೆಸಿದ ಸಂಶೋಧನೆಯ ಮೇರೆಗೆ ರೇಮಂಡರು ರೋಮನ್ ಕ್ಯಾಥೋಲಿಕರು ಭಾರತ ದೇಶದ ವೈವಿಧ್ಯಮಯ ಮತ್ತು ಬಹುಸಂಸ್ಕೃತಿಯ ಪ್ರದೇಶದವರು ಎಂಬುದನ್ನು ಸಾಬೀತುಪಡಿಸಿರುವುದು ಶ್ಲಾಘನೀಯ.

ಬಿಜಾಪುರದ ಸುಲ್ತಾನನನ್ನು 1510ರಲ್ಲಿ ಸೋಲಿಸಿದ ಪೋರ್ಚುಗೀಸರು ಗೋವಾ ಪ್ರದೇಶವನ್ನು ಆಕ್ರಮಣ ಮಾಡಿ, ತಮ್ಮ ಅಧಿಕಾರವನ್ನು ಭದ್ರವಾಗಿ ಸ್ಥಾಪಿಸಿದರು. ಮೇ 1542ರಲ್ಲಿ ಯೇಸು ಸಭೆಯ ಸ್ಪೇನ್ ಮೂಲದ ಪ್ರಖ್ಯಾತ ಸಂತರಾದ ಫ್ರಾನ್ಸಿಸ್ ಝೇವಿಯರವರು ಗೋವಾಕ್ಕೆ ಆಗಮಿಸಿ ನಂತರ 1560ರಲ್ಲಿ ಮರಣ ಹೊಂದಿದರು. ಈ ಎರಡು ಪ್ರಮುಖ ಅಲೆಗಳಲ್ಲಿ ಗೋವಾದ ಜನರು ವಲಸೆ ಹೋದರು. 1560 ರಿಂದ 1570 ರವರೆಗೆ ಗೋವಾದಲ್ಲಿ ಪೋರ್ಚುಗೀಸ್ ವಿಚಾರಣೆಯ ನಿಮಿತ್ತ ಮತ್ತು 1570 ರಿಂದ 1590 ರವರೆಗೆ ಬಿಜಾಪುರದ ಸುಲ್ತಾನರ ಆಕ್ರಮಣದ ನಿಮಿತ್ತ ಜನರು ವಲಸೆ ಹೋದರು. ನಂತರ ಮೂರನೆಯ ವಲಸೆಯ ಅಲೆ 1683 ರಿಂದ 1750ರ ವರೆಗೆ ಮರಾಠದ ರಾಜ ಸಂಬಾಜಿಯ ಆಕ್ರಮಣದ ನಿಮಿತ್ತ ಜನರು ವಲಸೆ ಹೋದರು. ಈ ಸಂದರ್ಭದಲ್ಲಿ ರೇಮಂಡ್ ಮಸ್ಕರೇನ್ಹಸ್‌ರವರ ಮುತ್ತಜ್ಜ ಪಾಲ್ ಮಸ್ಕರೇನ್ಹಸ್‌ರವರ ತಂದೆ ಅಂತೋಣಿ ಜಾನ್ ಮಸ್ಕರೇನ್ಹಸ್‌ರವರು ತನ್ನ ಹೆಂಡತಿ ಸೆಲಾಫಿಯಾರ ಹಾಗೂ ಮಕ್ಕಳೊಂದಿಗೆ ಮೂಡುಬಿದ್ರೆಯ 'ಚೌಟಾ ರಾಜರ' ತೋಟದಲ್ಲಿ ಕೆಲಸಕ್ಕಿದ್ದರು. ನಂತರ ಅವರು ಮಂಗಳೂರಿನ ಬೊಂದೆಲ್‌ಗೆ ಬಂದು ನೆಲೆಸಿದರು.

ಇಲ್ಲಿದ್ದಾಗ 24 ಫೆಬ್ರವರಿ 1784ರಲ್ಲಿ ಟಿಪ್ಪು ಸುಲ್ತಾನನ ಸೈನ್ಯವು ಮಸ್ಕರೇನ್ಹಸ್ ಕುಟುಂಬದವರನ್ನು ಶ್ರೀರಂಗಪಟ್ಟಣಕ್ಕೆ ಸೆರೆಯಾಳಾಗಿ ಕೊಂಡೊಯ್ಯಲಾಯಿತು. ಹೀಗೆ ಮಸ್ಕರೇನ್ಹಸ್ ಹಾಗೂ ಕ್ಯಾಥೋಲಿಕ್ ಕುಟುಂಬವು ನಿರಂತರವಾಗಿ ಅನುಭವಿಸಿದ ಕಷ್ಟದ ಯಾತನೆಯ ಪರಿಸ್ಥಿತಿಗಳನ್ನು ಎಳೆ ಎಳೆಯಾಗಿ ಆಧಾರ ಸಹಿತ ಲೇಖಕರು ನಿರೂಪಿಸಿರುವುದು ಸಾಹಸದ ಕೆಲಸವೇ ಸರಿ. ಟಿಪ್ಪು ಸುಲ್ತಾನನ ಮರಣದ ನಂತರ ಸೆರೆಯಿಂದ ಬಿಡುಗಡೆಗೊಂಡ ಕೆಲವರು ಮಂಗಳೂರಿನಲ್ಲಿ ಬಂದು ನೆಲೆಸುತ್ತಾರೆ. ಅದರಲ್ಲಿ ಮಸ್ಕರೇನ್ಹಸ್‌ರವರ ಕುಟುಂಬವೂ ಒಂದು. ನಂತರ ಕೆಲಸದ ನಿಮಿತ್ತ ಪೂಜ್ಯ ರೇಮಂಡರ ತಂದೆ ಹೆಂಡತಿ ಮಕ್ಕಳೊಡನೆ ಶಿವಮೊಗ್ಗಕ್ಕೆ ಬಂದು ನೆಲೆಸುತ್ತಾರೆ. ಅವರ ತಂದೆ ಶಿವಮೊಗ್ಗದ ಜೈಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಆಗ ಅದು ಪ್ರತಿಷ್ಠಿತ ಕೆಲಸವಾಗಿತ್ತು.

ನಂತರ 1824ರಲ್ಲಿ ಮಂಗಳೂರಿಗೆ ಯೇಸು ಸಭೆಯ ಆಗಮನವಾಗುತ್ತದೆ. ಇದು ಕಸೂತಿ ಕೆಲಸ, ಕೈಗಾರಿಕೆಗಳ ಸ್ಥಾಪನೆಯ ಹಿನ್ನೆಲೆಯಲ್ಲಿ ಮುಖ್ಯವಾಗಿ ಬಟ್ಟೆ ನೇಯ್ಗೆ, ಎಣ್ಣೆಯ ಮಿಲ್‌ಗಳು, ಟೈಲ್ಸ್ ತಯಾರಿಕಾ ಕೇಂದ್ರ ಮುಂತಾದ ಪ್ರಗತಿಪರ ಕಾರ್ಯಗಳು ಜನರಿಗೆ ಉದ್ಯೋಗದ ಅವಕಾಶ ಕಲ್ಪಿಸಿದವು. ಪೋಪ್ ಲಿಯೋ XIII ರವರು ಮಂಗಳೂರಿನ ಸೇವಾಕಾರ್ಯವನ್ನು ಯೇಸು ಸಭೆಯವರಿಗೆ ವಹಿಸಿದರು.

ನಂತರ ಅವರ ಸಾರಥ್ಯದಲ್ಲಿ ಮಂಗಳೂರು ಅಭಿವೃದ್ಧಿಯತ್ತ ಸಾಗಿದ್ದನ್ನು ಮನೋಜ್ಞವಾಗಿ ಇಸವಿ ದಾಖಲೆಗಳ ಸಹಿತ ಲೇಖಕರು ಸವಿಸ್ತಾರವಾಗಿ ವಿವರಿಸಿದ್ದಾರೆ. ಈ ದಾಖಲೆಗಳು ಕ್ರೈಸ್ತ ಮಿಶನರಿಗಳು ಕನ್ನಡ ನಾಡಿಗೆ ಕೊಟ್ಟ ಕೊಡುಗೆಗಳನ್ನು ನೆನಪಿಸುತ್ತವೆ.

ಎರಡನೆಯ ಅಧ್ಯಾಯದಲ್ಲಿ ಪೂಜ್ಯ ರೇಮಂಡ್ ಮಸ್ಕರೇನ್ಹಸ್‌ರವರ ಹುಟ್ಟು ಮತ್ತು ರೇಮಂಡರ ತಂದೆಯ ಕಾಯಿಲೆಯ ನಿಮಿತ್ತ ಮರಳಿ 1880ರಲ್ಲಿ ಮಂಗಳೂರಿಗೆ ವರ್ಗಾವಣೆಯಾಗಿ ಬರುತ್ತಾರೆ. ಅಲ್ಲಿ ಡೆಪ್ಯೂಟಿ ಕಮೀಷನರ್ ಆಫೀಸ್‌ನಲ್ಲಿ ಕೆಲಸಕ್ಕಿದ್ದರು. ಆಗ ಶಿವಮೊಗ್ಗದಲ್ಲಿ ರೇಮಂಡರಿಗೆ ಯಾಜಕರಾಗಬೇಕೆಂಬ ಆಸೆಯ ಕಿಡಿ ಚಿಗುರೊಡೆಯುತ್ತದೆ. ಅವರೇ ಹೇಳಿದಂತೆ “ಶಿವಮೊಗ್ಗದಲ್ಲಿ ಪ್ರಥಮ ಪರಮ ಪ್ರಸಾದವನ್ನು ಸ್ವೀಕರಿಸಿದಾಗ” ಎನ್ನುವುದು ಅವರಿಗಿದ್ದ ದೈವ ನಂಬಿಕೆ, ವಿಶ್ವಾಸ ಮತ್ತು ಪ್ರೀತಿಯನ್ನು ಬಿಂಬಿಸುತ್ತವೆ. ಇದು ಅವರ ಅನುಭಾವದ ಪ್ರಥಮ ಕುರುಹು. ನಂತರ ಶಿವಮೊಗ್ಗದ ಪರಿಸರ–ವಾತಾವರಣವನ್ನು ಚಿತ್ರಿಸುತ್ತಾ ಈ ಸುಂದರ ತಾಣದಲ್ಲಿ ಪೂಜ್ಯ ಮಸ್ಕರೇನ್ಹಸ್‌ರವರ ಜನನ ಮತ್ತು ಜ್ಞಾನದೀಕ್ಷೆಯ ಸಂಸ್ಕಾರದ ಸಂದರ್ಭದಲ್ಲಿ ರೇಮಂಡ್ ಕಮಿಲಸ್ ಇಬ್ಬರು ಸಂತರುಗಳ ಹೆಸರನ್ನು ಪಡೆದಿರುವುದನ್ನು ಜ್ಞಾನದೀಕ್ಷೆಯ ಸರ್ಟಿಫಿಕೇಟ್‌ನೊಂದಿಗೆ ದಾಖಲಿಸಿದ್ದಾರೆ.

ಅವರ ತಂದೆ ತಾಯಿಗಳಿಬ್ಬರು ಪ್ರಾರ್ಥನೆ ಮತ್ತು ದೇವರಲ್ಲಿ ಭಕ್ತಿಯುತ ಜೀವನ ನಡೆಸಿದರು. ಅದೇ ದೈವ ಪ್ರಸನ್ನತೆಯಲ್ಲಿ ತಮ್ಮ ತಂದೆಯ ಮರಣದ ನಂತರ ಅವರ ತಾಯಿ ಜೋಹಾನ್ನ, ಮಕ್ಕಳನ್ನು ಶಿಸ್ತು, ದೃಢತೆ, ಪಾವನತೆ ಮತ್ತು ದೈವಭಕ್ತಿಯಲ್ಲಿ ಮಕ್ಕಳನ್ನು ಬೆಳೆಸಿದರು. ಅದರಲ್ಲೂ ಹದಿಮೂರು ಮಕ್ಕಳನ್ನು ಪೋಷಣೆ ಮಾಡಿ ಉತ್ತಮ ಬದುಕಿಗೆ ದಾರಿ ಮಾಡಿಕೊಡುವುದು ತಪಸ್ಸಿನ ಕೆಲಸವೇ ಸರಿ. ಕಿರುಪುಷ್ಪ ಸಂತ ತೆರೆಸರ ಆದರ್ಶಗಳು ಅವರ ತಾಯಿ ಮೂಲಕ ರೇಮಂಡರ ಆಧ್ಯಾತ್ಮಿಕ ಜೀವನಕ್ಕೆ ಪ್ರೇರಣೆಯಾದವು. ಅಷ್ಟೇ ಅಲ್ಲ, ತನ್ನ ಬದುಕಿನ ಅನುಭವವು ಮುಂದೆ ಬಡ ಮಕ್ಕಳಿಗೆ ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲೆ ತೆರೆದರು. ಕೇವಲ ಪುರುಷ ಪ್ರಧಾನ ಸಮಾಜದಲ್ಲಿ ಶೈಕ್ಷಣಿಕ ಕ್ರಾಂತಿಯನ್ನು ಆರಂಭಿಸಿದರು ಎನ್ನುವ ಮಾತುಗಳು ನಿಜಕ್ಕೂ ಸೂಕ್ತವೆನಿಸುತ್ತದೆ. ಸಮಾಜದ ಚಿಕ್ಕ ಘಟಕ ಕುಟುಂಬ, ಈ ಕುಟುಂಬದಲ್ಲಿ ಹೆಣ್ಣಿನ ಪಾತ್ರ ಬಹು ಮಹತ್ವವುಳ್ಳದ್ದು, ಅದರಲ್ಲೂ ಮದುವೆಯಾದ ನಂತರ ತನ್ನ ಜವಾಬ್ದಾರಿಗಳನ್ನು ನಿಭಾಯಿಸಲು ಸರಿಯಾದ ಶಿಕ್ಷಣವಿದ್ದಾಗ ಎಂತಹ ಸವಾಲುಗಳನ್ನು ಧೈರ್ಯದಿಂದ ಎದುರಿಸಿ ಕುಟುಂಬದ ದೋಣಿಯನ್ನು ಸುರಕ್ಷಿತವಾಗಿ ಮುನ್ನಡೆಸಬಹುದು.

ತನ್ನ 37 ವಯಸ್ಸಿನಲ್ಲಿ ತನ್ನ ಗಂಡ ಲಾಜರಸ್‌ನನ್ನು ಕಳೆದುಕೊಂಡ ಜೋಹಾನ್ನ ಮನೆಯ ಎಲ್ಲಾ ಜವಾಬ್ದಾರಿಗಳನ್ನು ಅಂದರೆ ಅಷ್ಟು ಮಕ್ಕಳ ಬಟ್ಟೆ, ಪಾತ್ರೆ ತೊಳೆಯುವುದು, ಮನೆ ಕಸ ಗುಡಿಸುವುದು, ಒರೆಸುವುದು, ಅಡುಗೆ ಮಾಡುವುದು ಮುಂತಾದ ಅನೇಕ ಕೆಲಸಗಳೊಂದಿಗೆ ಮಕ್ಕಳ ಓದು ಬರಹ ಭವಿಷ್ಯದ ನಕ್ಷತ್ರಗಳನ್ನು

ರೂಪಿಸಿದರು. ಹಾಗೆಯೇ ಶಿಕ್ಷಣದ ಜವಾಬ್ದಾರಿ, ದೃಢತೆ ಮತ್ತು ಶಿಸ್ತಿನ ಜೀವನದಿಂದ ನಿಭಾಯಿಸಿದ್ದಲ್ಲದೆ, ಆರ್.ಎಫ್ ಮಸ್ಕರೇನ್ಹಸ್‌ರವರಿಗೆ ಮುಂದೆ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ವಿಶೇಷ ಕಾಳಜಿ ವಹಿಸುವಲ್ಲಿ ಪ್ರೇರಣೆಯಾಯಿತು ಎನ್ನುವ ಮಾತುಗಳು ಅಕ್ಷರಶಃ ಸರಿ ಎನಿಸುತ್ತದೆ.

ತಾಯಿಯ ಮಮತೆ, ಪ್ರೀತಿ ಮತ್ತು ಮಾರ್ಗದರ್ಶನದಲ್ಲಿ ರೇಮಂಡರು ಬೆಳೆದರು. ತಂದೆ ಸರ್ಕಾರಿ ಕೆಲಸದ ನಿಮಿತ್ತ ಹೆಚ್ಚು ಕಾಲ ಮನೆಯಿಂದ ಹೊರಗೆ ಉಳಿಯಬೇಕಾದಾಗ ಮನೆ ಗೃಹಿಣಿಯಾಗಿ, ತಾಯಿಯಾದವಳು ಮಕ್ಕಳ ಹಾರೈಕೆಯಿಂದ ಅವರ ಗುಣ ನಡತೆ ತಿದ್ದುವ ಮತ್ತು ಶಿಕ್ಷಣ ಒದಗಿಸುವ ಪ್ರತಿಯೊಂದು ವಿಚಾರಗಳ ಜವಾಬ್ದಾರಿ ಇರುತ್ತದೆ. ಆದ್ದರಿಂದ ರೇಮಂಡರ ಸಮತೋಲನ ವ್ಯಕ್ತಿತ್ವದ ಸರ್ವಾಂಗೀಣ ಬೆಳವಣಿಗೆಗೆ ತಾಯಿ ಜೋಹಾನ್ನರವರೇ ಅಡಿಪಾಯ. ತಾಯಿ ಮಕ್ಕಳ ನಡುವೆ ಹಾಗೂ ಸಂಬಂಧಿಕರೊಡನೆ ಇದ್ದ ಅನ್ಯೋನ್ಯ ಪ್ರೀತಿ ಇವೆಲ್ಲವೂ ಮುಂದೆ ಸಮಾಜ ಸುಧಾರಣೆಯ ಕಾರ್ಯಕ್ಕೆ ರೇಮಂಡರಿಗೆ ಪ್ರೇರಣೆಯಾದವು ಎಂದು ಲೇಖಕರು ಅನೇಕ ಉದಾಹರಣೆಗಳ ಮೂಲಕ ಪಾಲಕರ ವ್ಯಕ್ತಿತ್ವ ಹಾಗೂ ಅವರು ಬೆಳೆದ ವಾತಾವರಣ, ಮಕ್ಕಳ ಮುಂದಿನ ಉಜ್ವಲ ಭವಿಷ್ಯಕ್ಕೆ ನಾಂದಿ ಎನ್ನುವುದನ್ನು ಲೇಖಕರು ಸ್ಪಷ್ಟಪಡಿಸಿದ್ದಾರೆ.

'ಗುರುದೀಕ್ಷೆಯ ಕರೆ'ಯು ಮೊದಲು ತಾಯಿಯ ಹೃದಯದಿಂದ ಆರಂಭಗೊಳ್ಳುತ್ತದೆ. ಇದನ್ನು ಸಂತ ಪೋಪ್ ಪಯಸ್ X (Pius X) ಇವರು ಪೋಪ್ ಆಗುವ ಮೊದಲು ತನ್ನ ತಾಯಿಯನ್ನು ಭೇಟಿಯಾಗಲು ಹೋದಾಗ, ತನ್ನ ಮಗನ ಕೈಯ ಉಂಗುರಕ್ಕೆ ಮುತ್ತಿಕ್ಕುತ್ತಾ ಹೀಗೆ ಹೇಳುತ್ತಾರೆ: "ಹೌದು ಮಗನೇ (ಕೈಯನ್ನು ತೋರಿಸುತ್ತಾ) ನನ್ನ ಕೈಯಲ್ಲಿನ ಈ ಉಂಗುರ ಇಲ್ಲದಿದ್ದರೆ, ನಿನ್ನ ಕೈಯಲ್ಲಿ ಈ ಉಂಗುರ ಬರುತ್ತಿರಲಿಲ್ಲ" ಎನ್ನುತ್ತಾರೆ. ಸಂತ ಪೋಪ್ ಪಯಸ್ X ತಮ್ಮ ಈ ಅನುಭವವನ್ನು ಈ ರೀತಿಯಾಗಿ ಹೇಳುತ್ತಾರೆ: "ಪ್ರತಿಯೊಂದು ದೈವ ಕರೆಯು ತಾಯಿಯ ಹೃದಯದ ಮೂಲಕ ಬರುತ್ತದೆ. ಇದು ಕೇವಲ ದೈವಕರೆ ಹೊಂದಿದ ಯಾಜಕ ಮತ್ತು ಧರ್ಮಭಗಿನಿಯರಿಗೆ ಮಾತ್ರವಲ್ಲ ಮದುವೆಯಾದ ಪ್ರತಿಯೊಬ್ಬ ವ್ಯಕ್ತಿಗಳೂ ಸಹ ದೇವರಿಂದ ಕರೆಯಲ್ಪಟ್ಟವರು." ಆದ್ದರಿಂದ ಜೋಹಾನ್ನ ಯಾವುದೇ ಸಂಶಯವಿಲ್ಲದೆ ರೇಮಂಡರ ಅತ್ಯುತ್ತಮ ಶ್ರೇಷ್ಠ ಗುರುವಾಗಿದ್ದರು. ಅವರ ಪ್ರೀತಿ ಮತ್ತು ಕಾಳಜಿ ಕುಟುಂಬವನ್ನು ಕಟ್ಟಿ ಮುನ್ನಡೆಸಿದೆ. ಸಂಜೆ 8.00 ಗಂಟೆಯ ಒಳಗೆ ಆಟವಾಡಿ ಮಕ್ಕಳು ಮನೆಯಲ್ಲಿರಬೇಕಿತ್ತು. ನಂತರ ಸ್ನಾನ ಮಾಡಿ ಪ್ರಾರ್ಥನೆಗೆ ಸಿದ್ಧರಾಗಿರಬೇಕಾಗಿತ್ತು.

ಕುಟುಂಬದಲ್ಲಿ ಪ್ರಾರ್ಥನೆಗೆ ಮೊದಲ ಆದ್ಯತೆ ಇತ್ತು. ಉತ್ತಮ ನಡವಳಿಕೆ ರೇಮಂಡರಿಗೆ ಕೆಟ್ಟದರ ನಡುವೆ ಒಳಿತನ್ನು ಆಯ್ಕೆ ಮಾಡಲು ಪ್ರೇರೇಪಿಸಿತು. ಜೋಹಾನ್ನರವರ 13 ಮಕ್ಕಳಲ್ಲಿ ರೇಮಂಡರು 7ನೇಯವರಾಗಿದ್ದರು. ತಂದೆ ತಾಯಿಗಳಿಬ್ಬರು ಜಪ, ತಪ, ಪ್ರಾರ್ಥನೆ ವಿಧಿಗಳಲ್ಲಿ ಚಾಚು ತಪ್ಪದೆ ಭಾಗವಹಿಸುತ್ತಿದ್ದು,

ದೇವರಲ್ಲಿ ಭಯಭಕ್ತಿವುಳ್ಳವರಾಗಿದ್ದರು. ವಿಶ್ವಾಸದ ವಿದ್ಯಾಭ್ಯಾಸದೊಂದಿಗೆ ಲೌಕಿಕ ಶಿಕ್ಷಣವನ್ನು ನೀಡಿದರು. ಗುರುಗಳಾದಾಗ ತನ್ನ ಧರ್ಮಕೇಂದ್ರದ ಭಕ್ತಾದಿಗಳೊಂದಿಗೆ ತಾವು ಸಮಯದ ಪ್ರಜ್ಞೆ, ಅದರ ಪಾಲನೆ ಮತ್ತು ಮುಖ್ಯ ಕೆಲಸಗಳಿಗೆ ತಕ್ಕಂತೆ ಆದ್ಯತೆ ನೀಡುವುದನ್ನು ಮನೆಯಲ್ಲಿ ಕಲಿತರು ಎಂದು ಹೇಳುತ್ತಿದ್ದರು. (ಈ ಎಲ್ಲಾ ವಿಷಯಗಳು ನಿಜಕ್ಕೂ ಇಂದಿನ ತಂದೆ ತಾಯಿ ತಮ್ಮ ಮಕ್ಕಳನ್ನು ಹೇಗೆ ಬೆಳೆಸಬೇಕೆನ್ನುವ ಮಾರ್ಗದರ್ಶನ ನೀಡುತ್ತವೆ. ಅದರೊಟ್ಟಿಗೆ ಮಕ್ಕಳಿಗೆ ಶಿಸ್ತು, ಸಮಯದ ಪ್ರಜ್ಞೆ, ದೇವರಲ್ಲಿ ಭಯಭಕ್ತಿ ಮುಂತಾದ ಉನ್ನತ ಮೌಲ್ಯಗಳ ಅಗತ್ಯತೆಯನ್ನು ತಿಳಿಸುತ್ತವೆ). ಹೀಗೆ ಜೋಹಾನ್ನರವರು ತಮ್ಮ ಮಕ್ಕಳಿಗೆ ಬದುಕಿನಲ್ಲಿ ಸಕಾರಾತ್ಮಕವಾಗಿದ್ದು, ಜೀವನವನ್ನು ಎದುರಿಸುವ ಕಲೆಯನ್ನು ಕಲಿಸಿದರು ಎಂಬುದರ ಕುರಿತು ಸವಿಸ್ತಾರವಾದ ಚಿತ್ರಣವಿದೆ.

ಮಾರ್ಚ್ 4, 1900ರಲ್ಲಿ ಮಗ ರೇಮಂಡರ 'ಯಾಜಕಾಭಿಷೇಕವು' ಅವರಿಗೆ ಅತೀವ ಆನಂದ, ಸಂತೋಷ ಸಂತೃಪ್ತಿ ತಂದಿತ್ತು. "ನನ್ನ ತಾಯಿಯ ಮಡಿಲಿನಲ್ಲಿ, ಮೊದಲ ಶಿಸ್ತಿನ, ಸ್ವಯಂನಿಯಂತ್ರಣ (ಆತ್ಮ ಸಂಯಮ) ಸ್ವಾರ್ಥ ತ್ಯಾಗದ ಪಾಠಗಳನ್ನು ಕಲಿತೆನು" ಎನ್ನುತ್ತಾರೆ ರೇಮಂಡರು. ಹೀಗೆ ರೇಮಂಡರು ತಮ್ಮ ಅಮ್ಮನಿಂದ ಪಡೆದ ಅನೇಕ ಪ್ರೇರಣೆ ಮತ್ತು ಮಾರ್ಗದರ್ಶನದ ಕುರಿತು ಲೇಖಕರು ಈ ಅಧ್ಯಾಯದಲ್ಲಿ ತಿಳಿಸಿದ್ದಾರೆ.

**ಶಾಲಾದಿನಗಳು – ತರಗತಿ 1 ರಿಂದ ಮೆಟ್ರಿಕ್ಯುಲೇಷನ್ (1880 – 1890)**

1880ರಲ್ಲಿ ರೇಮಂಡ್ ಮಸ್ಕರೇನ್ಹಸ್‌ರವರು ಮಿಲಾಗ್ರಿಸ್ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಆರಂಭಿಸಿದರು. ನಂತರ ಆ ಶಾಲೆಯು ಯೇಸುಸಭೆಯವರ ಅಧೀನಕ್ಕೆ ಬಂದು 1928ರಲ್ಲಿ ಮಿಲಾಗ್ರಿಸ್ ಧರ್ಮಕೇಂದ್ರದ ಬೋರ್ಡ್‌ಗೆ ವರ್ಗಾವಣೆಯಾಯಿತು. ಪ್ರೌಢಶಿಕ್ಷಣವನ್ನು ಸಂತ ಆಲೋಷಿಯಸ್ ಕಾಲೇಜಿನಲ್ಲಿ ಮುಗಿಸಿದರು. ಅಷ್ಟೇ ಅಲ್ಲದೆ ವಿವಿಧ ಕಟ್ಟಡಗಳ ಸ್ಥಾಪನೆ, ಬಿಷಪ್ ಮನೆಯ ಚಾಪಲ್, ರೇಮಂಡರು ಓದುತ್ತಿದ್ದ ಶಾಲಾ ಕೊಠಡಿಗಳು, ಫಾ। ಮುಲ್ಲರ್ಸ್ ಸೇವಾ ಸಂಸ್ಥೆಗಳ ಸ್ಥಾಪನೆ, ಸಂತ ಆಲೋಷಿಯಸ್‌ನ ಈಗಿನ ಕಟ್ಟಡದ ಶಂಕುಸ್ಥಾಪನೆ ಮತ್ತು ಉದ್ಘಾಟನೆ ವಿವಿಧ ವಿಷಯಗಳಲ್ಲಿ ರೇಮಂಡರಿಗೆ ದೊರೆತ ಬಹುಮಾನ ರೂಪದ ಸರ್ಟಿಫಿಕೇಟ್‌ಗಳ ಚಿತ್ರಪಟ ಇದೆ.

1890ರ ಜನವರಿಯಲ್ಲಿ ಅವರು ಕಮರ್ಷಿಯಲ್ ಕೋರ್ಸ್‌ಗೆ ಸೇರುತ್ತಾರೆ. ಅಲ್ಲಿ ಅವರು ನಿಯಮಿತ ವಿಷಯಗಳೊಂದಿಗೆ ಅನೇಕ ವಿಷಯಗಳ ಕುರಿತು ಅಧ್ಯಯನ ಮಾಡಿರುವುದನ್ನು ಉಲ್ಲೇಖಿಸುತ್ತಾರೆ. ಇದು ರೇಮಂಡರ ಕುರಿತು ಲೇಖಕರು ನಡೆಸಿರುವ ಆಳವಾದ ಅಧ್ಯಯನವನ್ನು ಸೂಚಿಸುತ್ತದೆ.

1890ರಲ್ಲಿ ರೇಮಂಡರು ಆಯ್ಕೆಯ ವಿಷಯಗಳೊಂದಿಗೆ ವ್ಯವಹಾರಜ್ಞಾನಕ್ಕಾಗಿ ಇಂಗ್ಲೀಷ್ ಪತ್ರ ಬರೆಯುವ ಕಲೆ, ವ್ಯಾವಹಾರಿಕ ಮತ್ತು ವಿವಿಧ ದಾಖಲಾತಿಗಳ

ಪುಸ್ತಕದ ನಿರ್ವಹಣೆ, ಟೈಪ್‌ರೈಟಿಂಗ್ ಮತ್ತು ಶಾರ್ಟ್‌ಹ್ಯಾಂಡ್, ಲೆಕ್ಕಪತ್ರಗಳ ಪ್ರಕ್ರಿಯೆ, ಕ್ಷೇತ್ರಗಣಿತ ಮುಂತಾದವುಗಳನ್ನು ಕಲಿತರು. ಮುಂದೆ ಇವೆಲ್ಲವೂ ಕಾಲೇಜಿನಲ್ಲಿ ಬೋಧಿಸುವ ವಿಷಯಗಳಾದವು. ಆದ್ದರಿಂದ ಚಿಕ್ಕ ವಯಸ್ಸಿನಲ್ಲಿಯೇ ಬುದ್ಧಿವಂತನಾದ ರೇಮಂಡರು ಅನೇಕ ವಿಷಯ ಮತ್ತು ಕೌಶಲ್ಯಗಳನ್ನು ಕಲಿಯುವುದು ಮಾತ್ರವಲ್ಲ ಅವುಗಳಲ್ಲಿ ಪಾರಂಗತರಾದರು. ಮೆಟ್ರಿಕುಲೇಷನ್ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾದ ಬೆರಳೆಣಿಕೆಯ ವಿದ್ಯಾರ್ಥಿಗಳಲ್ಲಿ ಒಬ್ಬರಾದರು. ಮಾತ್ರವಲ್ಲ ಸರ್ವ ಜವಾಬ್ದಾರಿಗಳನ್ನು ದಕ್ಷತೆಯಿಂದ ನಿಭಾಯಿಸಲು ಸಹಕಾರಿಯಾದವು ಎನ್ನುವುದನ್ನು ತುಂಬಾ ಅರ್ಥಪೂರ್ಣವಾಗಿ ಈ ಕೃತಿಯಲ್ಲಿ ಲೇಖಕರು ನಿರೂಪಿಸಿದ್ದಾರೆ.

**ಧಾರ್ಮಿಕ ಜೀವನದಿಂದ ಯಾಜಕಾಭಿಷೇಕದವರೆಗೆ (1891 ರಿಂದ 1900)**

ಅಧ್ಯಾಯ 23ರಲ್ಲಿ ಧಾರ್ಮಿಕ ಜೀವನದ ತರಬೇತಿಯಿಂದ ಯಾಜಕಾಭಿಷೇಕದವರೆಗೆ ವಿವರಣೆಯನ್ನು ಲೇಖಕರು ನೀಡಿದ್ದಾರೆ. ಪ್ರತಿಯೊಬ್ಬರಿಗೂ ಬದುಕಿನಲ್ಲಿ ಏನೆಲ್ಲಾ ಆಗಬೇಕೆನ್ನುವ ಕನಸು ಹೊತ್ತಿರುತ್ತಾರೆ. ಆದರೆ ಆಯ್ಕೆಯ ಸಂದರ್ಭ ಬಂದಾಗ, ಬದುಕಿನ ಸಾರ್ಥಕತೆ ಮತ್ತು ಜೀವನದಲ್ಲಿ ಯಶಸ್ಸು ತಂದು ಕೊಡುವ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳಲು ಬಯಸುತ್ತಾರೆ. ಆದರೆ ಮುಂದೆ ಬದುಕಿನ ಪಯಣದಲ್ಲಿ ಅನೇಕ ಗೊಂದಲ, ಸಮಸ್ಯೆಗಳಿಗೀಡಾಗಿ ಅತೃಪ್ತರಾಗುತ್ತಾರೆ. ಯಾವುದಕ್ಕಾಗಿ ಗಂಡು ಹೆಣ್ಣಾಗಿ ನಾವು ಸೃಷ್ಟಿಸಲ್ಪಟ್ಟಿದ್ದೇವೆ ಮತ್ತು ನಾವು ಏನಾಗಬೇಕೆಂದು ಬಯಸುತ್ತೇವೆಯೋ ಎನ್ನುವ ಸಂಘರ್ಷವನ್ನು ಪ್ರತಿಯೊಬ್ಬರು ಎದುರಿಸುತ್ತೇವೆ. ಹೆಚ್ಚಿನ ಮನುಷ್ಯರು ಜೀವಿತದಲ್ಲಿ ಯಶಸ್ಸನ್ನು ಕಾಣುವ ಹಂಬಲದಲ್ಲಿ ಆರೋಗ್ಯ ಕಳೆದುಕೊಂಡು ನಿಜವಾದ ಸಂತೋಷ ಪಡೆಯಲು ಸೋಲುತ್ತಾರೆ. ಆದರೆ ರೇಮಂಡರು ಪ್ರಾರ್ಥನೆ, ಸೇವೆ ಎಂದು ಹೆಚ್ಚಿನ ಸಮಯವನ್ನು ದೇವರ ಧ್ಯಾನದಲ್ಲಿ ಕಳೆಯುತ್ತಾ ಬದುಕಿನ ಎಲ್ಲಾ ಕಾರ್ಯ ಕ್ಷೇತ್ರಗಳಲ್ಲಿ ಯಶಸ್ಸನ್ನು ಕಂಡವರು. ಅವರು ದೇವರನ್ನು ಪ್ರೀತಿಸುವುದರಲ್ಲಿ ಸಂತೋಷದ ಜೀವವನ್ನು ಸವೆಸಿದವರು. ಆದ್ದರಿಂದ ತಮ್ಮನ್ನು ಸೃಷ್ಟಿಸಿದ ಉದ್ದೇಶವನ್ನು ಪೂರೈಸಿ ಜನಮಾನಸದಲ್ಲಿ ಪುಣ್ಯ ಪಡೆದ ಮಹಾನುಭಾವರಾದರು. ಅನಿಕೇತನರಾಗಿ ಸರ್ವರಿಗೂ ಸ್ಫೂರ್ತಿಯ ಸೆಲೆಯಾದರು.

ಎಷ್ಟೋ ಮಂದಿ ತಮ್ಮ ಜೀವಿತದ ಮಧ್ಯಂತರದಲ್ಲಿ ದೇವರ ಸೇವೆ ಮತ್ತು ಜನರ ಸೇವೆಗಾಗಿ ಸೇರಿಕೊಳ್ಳುತ್ತಾರೆ. ಧಾರ್ಮಿಕ ಕರೆ ಅಲ್ಲ ಯಾವುದೋ ವೃತ್ತಿಗಾಗಿ ಬಂದಿದ್ದೇವೆ ಎಂದೆನಿಸಿ ಸಂಘರ್ಷಕ್ಕೀಡಾಗುತ್ತಾರೆ. ನಂತರ ಧಾರ್ಮಿಕ ಜೀವನ ತ್ಯಜಿಸಿ, ಲೌಕಿಕ ವೃತ್ತಿಯನ್ನು ಆಯ್ದುಕೊಳ್ಳುತ್ತಾರೆ. ನಾವೆಲ್ಲರು ಲೌಕಿಕ ವೃತ್ತಿಯನ್ನು ನಮ್ಮ ಆಸೆ, ಇಚ್ಛೆ ಮತ್ತು ಸಾಮರ್ಥ್ಯಗಳ ಮೇರೆಗೆ ಆಯ್ದುಕೊಳ್ಳುತ್ತೇವೆ. ಆದರೆ ನಮ್ಮ ಧಾರ್ಮಿಕ ವೃತ್ತಿಯನ್ನು ದೇವರು ನಮಗೆ ಯಾವ ವರದಾನ ನೀಡಿದ್ದಾರೆಂದು ಅರ್ಥೈಸಿಕೊಂಡು ಆರಿಸಿಕೊಳ್ಳುತ್ತೇವೆ. ರೇಮಂಡರು ಯುವಕರಾಗಿದ್ದಾಗಲೇ ದೇವರು ತಮಗೆ ಯಾವ ವರದಾನ ಕೊಟ್ಟಿದ್ದಾರೆಂಬುದನ್ನು ಬಹುಬೇಗ ಅರ್ಥೈಸಿಕೊಂಡರು. ಆಗಲೇ ಈ ವರದಾನಗಳನ್ನು ಬಳಸಿಕೊಂಡು ವಿವಿಧ ಜನರ ಸೇವೆಯಲ್ಲಿ ಕ್ರಿಸ್ತನ ಸೇವೆ ಹೇಗೆ

ಮಾಡಬಲ್ಲೆನು ಎಂಬುದನ್ನು ನಿರ್ಧರಿಸಿದ್ದರು. ನಂತರ ರೇಮಂಡರು ತರಬೇತಿ ಪಡೆದ ಸೆಮಿನರಿಯ ರೂಪರೇಷೆ ಮತ್ತು ಆಡಳಿತದ ವರ್ಗಾವಣೆ ಮುಂತಾದ ಸೆಮಿನರಿಗೆ ಸಂಬಂಧಪಟ್ಟ ಅಂಶಗಳನ್ನು ನೀಡಿದ್ದಾರೆ.

23 ಫೆಬ್ರವರಿ 1891ರಂದು ತಮ್ಮ 16ನೇ ವಯಸ್ಸಿನಲ್ಲಿ ಸೆಮಿನರಿಯನ್ನು ಸೇರಿದರು. ಸೆಮಿನರಿಯಲ್ಲಿ ತಾವು ತೋರಿದ ದೈವಭಕ್ತಿ, ಶಿಸ್ತು, ದೃಢತೆ, ಆತ್ಮಸಂಯಮ, ಹೊಸ ಸಂಗತಿಗಳಲ್ಲಿ ತೋರಿದ ಧೈರ್ಯ, ಸಾಹಸ ಪ್ರವೃತ್ತಿ, ದೃಢ ಇಚ್ಛೆ, ಸಂಕಲ್ಪ ಮತ್ತು ಬಡವ, ದೀನ, ದಲಿತರ ಮೇಲಿದ್ದ ಅನುಕಂಪ, ಪ್ರೀತಿ ಇವೆಲ್ಲವೂ ನನ್ನ ತಂದೆ ತಾಯಿಯರ ಬಳುವಳಿ ಎಂದು ಹೇಳುವುದರಲ್ಲಿ ರೇಮಂಡರಿಗೆ ತಂದೆ ತಾಯಿಯರ ಬಗ್ಗೆ ಇದ್ದ ಗೌರವ, ಕಾಳಜಿ, ಮತ್ತು ಅವರಿಂದ ಏನೆಲ್ಲಾ ಪಡೆದಿದ್ದಾರೋ ಅದಕ್ಕೆ ಕೃತಜ್ಞರಾಗಿರುವುದು ಕಂಡುಬರುತ್ತದೆ. ಇವು ನಿಜವಾಗಿಯೂ ಒಬ್ಬ ಸಂತನಿಗೆ, ಮಹಾತ್ಮನಿಗೆ ಇರಬೇಕಾದ ಗುಣಲಕ್ಷಣಗಳೇ ಸರಿ.

ಈ ಸೆಮಿನರಿ ತರಬೇತಿ ಕೇವಲ ಪ್ರಸ್ತುತ ಆಟ, ಸ್ಪರ್ಧೆ, ತರಗತಿ ಮತ್ತು ಪರೀಕ್ಷೆಗಳಿಗೆ ಮಾತ್ರ ಸೀಮಿತವಾಗಿರದೆ ಸಮತೋಲನದ ವ್ಯಕ್ತಿತ್ವ ನಿರ್ಮಾಣಕ್ಕೆ ಬೇಕಾದ ಎಲ್ಲಾ ಅಂಶಗಳನ್ನು ಒಳಗೊಂಡಿದ್ದರು. ತಪ್ಪುಗಳನ್ನು ತಿದ್ದಿ, ಮುಕ್ತ ಮನಸ್ಸಿನಿಂದ ಸ್ಪಂದಿಸಿ, ಅವುಗಳನ್ನು ಸರಿಪಡಿಸಿಕೊಳ್ಳುತ್ತಿದ್ದರು. ಸೆಮಿನರಿ ತರಬೇತಿಯು ಅವರ ಉನ್ನತ ಗುಣಮೌಲ್ಯಗಳನ್ನು ರೂಢಿಸಿಕೊಳ್ಳುವುದರೊಂದಿಗೆ ಶಿಸ್ತು ಮತ್ತು ಪ್ರಾರ್ಥನೆಗಳೊಂದಿಗೆ ಮಿಳಿತವಾಗಿತ್ತು. ತಮ್ಮ ಈ ಅವಧಿಯ ಅನುಭವಗಳನ್ನು ತಾವು ಸ್ಥಾಪಿಸಿದ ಸಂಸ್ಥೆಯ ಸಹೋದರಿಯರಿಗೆ ತರಬೇತಿ ಕೊಡುವ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತಿದ್ದರು.

ಈ ಅಧ್ಯಾಯದಲ್ಲಿ ಗುರುಗಳ ವ್ಯಕ್ತಿತ್ವದ ಬಗ್ಗೆ, ಸೆಮಿನರಿಯ ಜೀವನ, ಸಂತ ಅಲೋಷಿಯಸ್ ಚಾಪಲ್ ಕಟ್ಟಿದವರ ಕುರಿತು ಮತ್ತು ಸುಂದರ ಆಕರ್ಷಕ ಪೇಂಟಿಂಗ್ ಮಾಡಿದವರ ಕುರಿತು ವಿವರ ಇದೆ. ಅವರ ತರಬೇತಿಯಲ್ಲಿ ಮನುಷ್ಯತ್ವದ ತರಬೇತಿ, ಆಧ್ಯಾತ್ಮದ ತರಬೇತಿ, ಶೈಕ್ಷಣಿಕ ತರಬೇತಿ ಧರ್ಮಕೇಂದ್ರದ ಪಾಲನೆಯ ತರಬೇತಿ ಹೀಗೆ ಪ್ರತಿಯೊಂದು ತರಬೇತಿಯಲ್ಲೂ ಉತ್ತಮ ಸಂವೇದಶೀಲನೆಯುಳ್ಳ, ತಾಳ್ಮೆಯ, ಜವಾಬ್ದಾರಿಯುತ ಮತ್ತು ದಕ್ಷತೆಯಿಂದ ಆಡಳಿತ ನಿರ್ವಹಿಸುವ ವ್ಯಕ್ತಿಗಳನ್ನಾಗಿ ನಿರ್ಮಿಸುವ ವಿಷಯಗಳ ಬೋಧನೆಗಳಿರುತ್ತಿದ್ದವು. ಮಾತ್ರವಲ್ಲ ಅವುಗಳನ್ನು ತಮ್ಮ ಜೀವಿತದಲ್ಲಿ ಅಳವಡಿಸಿಕೊಳ್ಳುವ ಮಟ್ಟಿಗೆ ಅವರನ್ನು ರೂಪಿಸಲಾಗುತ್ತದೆ.

ಕೇವಲ ಕ್ರೈಸ್ತ ಧರ್ಮದ ವಿಷಯವಲ್ಲದೆ ಹಿಂದು, ಜೈನ ಮತ್ತು ಇತರ ಧರ್ಮದೊಂದಿಗೆ ಮಾನವಶಾಸ್ತ್ರ, ಮನೋವಿಜ್ಞಾನ, ಸಮಾಜಶಾಸ್ತ್ರ, ತತ್ವಶಾಸ್ತ್ರ, ಧರ್ಮಶಾಸ್ತ್ರ, ಧರ್ಮಗ್ರಂಥ ಮತ್ತು ಇತರ ವಿಷಯಗಳೊಂದಿಗೆ ರೇಮಂಡರು ತರಬೇತಿ ಪಡೆದರು. ಆದ್ದರಿಂದ ಅವರು ಮುಂದೆ ಅತ್ಯುತ್ತಮ ಮಾನವೀಯತೆವುಳ್ಳ, ದಕ್ಷ ಆಡಳಿತಗಾರರಾಗಿ, ಉತ್ತಮ ಬೋಧಕರಾಗಿ ಉದಾತ್ತ ಪಾಲಕರಾಗಿ ಜನಮಾನಸದಲ್ಲಿ ಹೆಸರುವಾಸಿಯಾದರು. ಅಷ್ಟೇ ಅಲ್ಲ, ತಾವು ಸ್ಥಾಪಿಸಿದ ಸಂಸ್ಥೆಯ

ನಿಯಮಾವಳಿಗಳನ್ನು ಹೊಂದಿದ ಸಂವಿಧಾನ ಪುಸ್ತಕವನ್ನು ತುಂಬಾ ಅರ್ಥಪೂರ್ಣ ಹಾಗೂ ಔಚಿತ್ಯ ಪೂರ್ಣವಾಗಿ ಹೊರತರಲು ಮತ್ತು ಸಂಸ್ಥೆಯ ಸಹೋದರಿಯರು ಆ ನಿಟ್ಟಿನಲ್ಲಿ ಸೇವೆ ಸಲ್ಲಿಸಲು ಪ್ರೇರೇಪಿಸಿದರು ಎನ್ನುವ ಅಂಶಗಳು ಈ ಕೃತಿಯಲ್ಲಿ ಲೇಖಕರು ತಿಳಿಸಿದ್ದಾರೆ. ರೇಮಂಡರು ಧರ್ಮಗ್ರಂಥ ಮತ್ತು ಕ್ಯಾನನ್ ಲಾಗಳನ್ನು ಬಾಯಿಪಾಠ ಮಾಡಿದ್ದರು. ಸೆಮಿನರಿಯಲ್ಲಿ ಎಲ್ಲಾ ವಿಷಯಗಳನ್ನು ಲ್ಯಾಟಿನ್ ಭಾಷೆಯಲ್ಲಿ ಬೋಧಿಸಲಾಗುತ್ತಿತ್ತು. ಮುಂದೆ ಇದು ಅವರಿಗೆ ಪ್ರಾಂತೀಯ ಭಾಷೆಯಾದ ಕೊಂಕಣಿಯಲ್ಲಿ ಧರ್ಮಗ್ರಂಥ, ಪ್ರಾರ್ಥನೆ ಮತ್ತು ಹಾಡುಗಳನ್ನು ಅನುವಾದಿಸಲು ಪ್ರೇರಣೆಯಾಯಿತು.

ಮಂಗಳೂರಿನ ರೊಸಾರಿಯೊ ಕೆಥಡ್ರಲ್ ಕಟ್ಟಿದ ಫಾ॥ ಉರ್ಭನ್ ಸ್ಟೈನ್ ಎಸ್‌ಜೆ ಹಾಗೂ ಅಪಸ್ಟೋಲಿಕ್ ಕಾನ್ವೆಂಟಿನಲ್ಲಿ ಆಶ್ರಯ ಪಡೆದರು. ನಂತರ ಕಂಕನಾಡಿನಲ್ಲಿ 1883ರಲ್ಲಿ ಕ್ಲೋಯಿಸ್ಟರ್ ಕಾರ್ಮೆಲ್ ಕಾನ್ವೆಂಟ್‌ನ್ನು ಸ್ಥಾಪಿಸಲು ಕಾರಣರಾದ ಸಂತ ಮರಿಯಮ್ಮ ಬವಾಡಿಯವರ ಕುರಿತು ಲೇಖಕರು ಬರೆದಿದ್ದಾರೆ. ಆ ಎರಡು ಸ್ಥಳಗಳು ಪೂಜ್ಯ ರೇಮಂಡರ ಜೀವನದಲ್ಲಿ ಮಹತ್ತರದ್ದಾಗಿವೆ. ಧರ್ಮಗುರುವಾಗಿ ಮೊದಲ ಪೂಜೆಯನ್ನು ಮಿಲಾಗ್ರಿಸ್‌ನ ಪವಾಡಗಳ ಮಾತೆ ಧರ್ಮಕೇಂದ್ರದಲ್ಲಿ ಅರ್ಪಿಸಿದರು. ನಂತರ ಬೆಂದೂರಿಗೆ ವರ್ಗಾವಣೆಯಾಗಿ ಬಂದು ಬರಡಾದ ಭೂಮಿಯು ಹಸನಾಗುವಂತೆ ಕ್ರಿಯಾಶೀಲವಾಗುವಂತೆ ಶ್ರಮಿಸಿದರು ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ಮನೋಜ್ಞವಾಗಿ ಲೇಖಕರು ವರ್ಣಿಸಿದ್ದಾರೆ.

**ಬೆಥನಿ ಸಂಸ್ಥೆಯ ಸ್ಥಾಪನೆ – ಅಂತಿಮ ಪಯಣದವರೆಗೆ (1900–1921)**

19 ಜುಲೈ 1921ರಲ್ಲಿ ಬೆಥನಿ ಸಂಸ್ಥೆಯನ್ನು ದೇವರ ಕೃಪೆಯಿಂದ ಮಂಗಳೂರಿನ ಇತಿಹಾಸದಲ್ಲೇ ಹೊಸ ಯುಗವನ್ನು ಆರಂಭಿಸಿದರು. ಇಲ್ಲಿ ಭಕ್ತಿ, ಪ್ರಾರ್ಥನೆ, ತ್ಯಾಗ, ಸಹಾಯ–ಸಹಕಾರದ ಅಂಶಗಳನ್ನು ಬಿತ್ತಿದರು. ಮಾತೆ ಮರಿಯಮ್ಮನವರಿಗೆ ದೇವದೂತರು ತಂದ ಸಂದೇಶ, ಯೇಸುವಿನ ಜನನದ ರಹಸ್ಯಗಳ ಸಮರ್ಪಣೆ ಮತ್ತು ತ್ಯಾಗ ಮತ್ತು ಪ್ರೀತಿಯ ಸಂಕೇತಗಳಾಗಿ ಬೆಥನಿ ಭಗಿನಿಯರಿಗೆ ಪಾಲಿಸಲು ಕರೆಕೊಟ್ಟರು. ನಂತರ ಬೈಬಲಿನ ಯೇಸುವಿನ ಕಷ್ಟ ಪಾಡುಗಳಲ್ಲಿ ಜೊತೆಯಾಗಿದ್ದ ಬೆಥನಿ ಕುಟುಂಬದ ಆದರ್ಶ ವ್ಯಕ್ತಿಗಳಾದ ಮಾರ್ತ, ಮೇರಿ, ಲಾಜರಸ್ ಎಂಬುವವರನ್ನು ಧ್ಯಾನ ಹಾಗೂ ಆತಿಥ್ಯಕ್ಕೆ ನೇಮಿಸಿದರು. ಜಪ, ತಪ ಪ್ರಾರ್ಥನೆ, ನಿಷ್ಕಲ್ಮಷ ಪ್ರೀತಿ ಮತ್ತು ಸೇವೆಯಿಂದ ಅತೀ ಚಿಕ್ಕ ವಯಸ್ಸಿನಲ್ಲೇ ಸಂತರಾದರು. ಈ ಕಿರುಪುಷ್ಪ ಸಂತ ತೆರೆಸರ ಮಗುವಿನಂತಹ ಸಂಪೂರ್ಣ ಭರವಸೆ, ಭಕ್ತಿ ಮತ್ತು ಆತ್ಮಗಳ ರಕ್ಷಣೆಗೆ ಮಾದರಿಯಾಗುವಂತೆ ಬೆಥನಿ ಭಗಿನಿಯರಿಗೆ ನೀಡಿದರು ಎಂಬುದನ್ನು ಲೇಖಕರು ಸವಿಸ್ತಾರವಾಗಿ ಚಿತ್ರಪಟಗಳ ಮೂಲಕ ಬಿಂಬಿಸಿದ್ದಾರೆ. ಇದು ಓದುಗರಿಗೆ ಮೊದಲಿನಿಂದ ಕಡೆಯ ತನಕ ಆಸಕ್ತಿಯನ್ನು ವೃದ್ಧಿಸಿ, ಸಮರ್ಪಕ ಮತ್ತು ಮಹತ್ವದ ಅಂಶಗಳನ್ನು ತಲುಪಿಸುವ ಆಶಯವನ್ನು ಹೊಂದಿರುವಂತೆ ಭಾಸವಾಗುತ್ತದೆ. ಇದು ಲೇಖಕರ ಪ್ರೌಢಿಮೆ, ಜಾಣ್ಮೆ ಮತ್ತು ವಿಷಯದ ಹಿಡಿತವನ್ನು

ಬಿಂಬಿಸುತ್ತದೆ.

ಈ ಅಧ್ಯಾಯದಲ್ಲಿ ಸ್ಥಳೀಯ ಸಂಸ್ಥೆಯ ಸ್ಥಾಪನೆಗೆ ಕಾರಣವಲ್ಲದೆ, ಜನರ ಧಾರ್ಮಿಕ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ವಿವರಿಸಿದ್ದಾರೆ. ಸರ್ವಜನರ ಉದ್ಧಾರದ ಪಣ ತೊಟ್ಟಿದ್ದ ರೇಮಂಡರು ಜಪ, ತಪ ಪ್ರಾರ್ಥನೆಗಳೊಂದಿಗೆ ದೇವರ ಮತ್ತು ಮಾನವರ ನಡುವಿನ ಸಂಪರ್ಕದ ಕೊಂಡಿಯಾಗಿದ್ದರು. ಬಿಷಪ್ ಪಾಲ್ ಪೆರಿನಿ ಯೇಸು ಸಭೆ ಇವರೊಂದಿಗೆ ನಡೆಸಿದ ಚರ್ಚೆಯ ಮೂಲಕ ಭಗವಂತನ ಇಚ್ಛೆಯನ್ನು ತಮ್ಮ ಜೀವಿತದಲ್ಲಿ ಕಂಡುಕೊಂಡರು. ಹಾಗೆಯೇ ಬೆಥನಿ ಸಂಸ್ಥೆಯನ್ನು ಕಟ್ಟಿ ನಿಲ್ಲಿಸಿದ ರೀತಿಯನ್ನು ಈ ಅಧ್ಯಾಯದಲ್ಲಿ ಲೇಖಕರು ಅನಾವರಣಗೊಳಿಸಿದ್ದಾರೆ.

**ಜೀವನದ ಸರಳ ನಿಯಮಗಳ ಪಾಲನೆ ಮತ್ತು ಏಳಿಗೆ**

ರೇಮಂಡರು ಕೆಲವು ತಿಂಗಳುಗಳ ನಿರಂತರ ಪ್ರಯತ್ನ ಮತ್ತು ಶ್ರಮದಿಂದಾಗಿ ಸಂತ ಸಬಾಷ್ಟಿಯನ್ ಶಾಲೆಯನ್ನು ಆರಂಭಿಸಿದರು. ಬೆಂದೂರಿನ ನಾಲ್ಕು ಶಿಕ್ಷಕಿಯರ ಮೂಲಕ ಸ್ಥಳೀಯ ಸಂಸ್ಥೆಯ ಸ್ಥಾಪನೆಗೆ ಅವರಿಗಿದ್ದ ಇಂಗಿತವು ಚಿಗುರೊಡೆದು ಕವಲಾಯಿತು. ಈ ನಾಲ್ವರ ಹೆಸರು: ಫ್ಲೋರಾ ಮಥಿಯಾಸ್, ಅರ್ಸಲಿನ್ ಮೆನೆಜೆಸ್, ಆಲಿಸ್ ಮಥಿಯಾಸ್ ಮತ್ತು ರೆಜಿನಾ ಗಟ್ರೂಡ್ ಗೊನ್ಸಾಲ್ವಿಸ್. ಅವರೊಡನೆ ನಿರಂತರ ಚರ್ಚೆ ಹಾಗೂ ಚಿಂತನೆಗಳ ಸಮಾಗಮ, ಆಲೋಚನೆ ಮತ್ತು ವಿನಿಮಯದೊಂದಿಗೆ ತಮ್ಮ ಮನದ ಇಂಗಿತವನ್ನು ಹಂಚಿಕೊಳ್ಳುತ್ತಿದ್ದರು. ರೇಮಂಡರು ಧಾರ್ಮಿಕ ಭಗಿನಿಯರಿಗಾಗಿ ಸ್ಥಾಪಿಸಲಿರುವ ಹೊಸ ಸಂಸ್ಥೆಯ ಕುರಿತು ತಿಳಿಸಿದರು. ಅವರೂ ಕೂಡ ಈ ಹೊಸ ಆದಿಯನ್ನು ತುಳಿಯಲು ಮನಃಪೂರ್ವಕವಾಗಿ ಒಪ್ಪಿದರು. ನಂತರ ಸಂಸ್ಥೆಗೆ ಅಗತ್ಯವಿರುವ ನಿಯಮಾವಳಿಗಳನ್ನು ರಚಿಸಿ ಬಿಷಪ್ ಪಾಲ್ ಪೆರಿನಿಯವರ ಆಶೀರ್ವಾದೊಂದಿಗೆ ಆರಂಭಿಸಿದರು.

ರೇಮಂಡರೇ ಹೇಳುವಂತೆ “ಬೆಥನಿ ಸ್ಥಾಪನೆಯ ಕಾರ್ಯವು ಬಿಷಪ್ ಪೆರಿನಿಯವರ ಆಶೀರ್ವಾದದಿಂದ ಆರಂಭವಾಯಿತು. ಅವರು ಪ್ರತಿಯೊಂದು ಹೆಜ್ಜೆಗಳಲ್ಲೂ ಧೈರ್ಯ, ಪ್ರೋತ್ಸಾಹ ತುಂಬಿದರು, ಅವರು ಅನೇಕ ಏರಿಳಿತಗಳನ್ನು ಎದುರಿಸಬೇಕಾಯಿತು. ಅದು ಅವರ ಸಾಮರ್ಥ್ಯಕ್ಕೆ ಅಲ್ಪವೇ ಸರಿ” ಎಂದಿರುವುದು ರೇಮಂಡರಿಗೆ ಇತರರ ಸಾಮರ್ಥ್ಯವನ್ನು ಗುರುತು ಹಚ್ಚುವ ಹಾಗೂ ಅದಕ್ಕೆ ತಕ್ಕಂತೆ ಗೌರವ ಮತ್ತು ಅವಕಾಶಗಳನ್ನು ಕಲ್ಪಿಸಿಕೊಡುವ ಸಾಮರ್ಥ್ಯವನ್ನು ಸೂಚಿಸುತ್ತದೆ. ಈ ಗುಣ ಒಬ್ಬ ಶ್ರೇಷ್ಠ ಗುರುವಿಗೆ ಸಿದ್ಧಿಸಿರುತ್ತದೆ ಎನ್ನುವುದು ಅವರ ಹೇಳಿಕೆಯಿಂದ ಸ್ಪಷ್ಟಗೊಳ್ಳುತ್ತದೆ.

ರೇಮಂಡರು ಬೆಂದೂರಿನಲ್ಲಿ ಜಾಗವನ್ನು ಖರೀದಿಸಿ ಬೆಥನಿ ಸಂಸ್ಥೆ ಸ್ಥಾಪಿಸಿ ಅಲ್ಲಿ ಬೆಥನಿ ‘ಮದರ್ ಹೌಸ್’ ಅನ್ನು ಕಟ್ಟಿದರು. ನಂತರ 1921ರ ಮಾರ್ಚ್ ತಿಂಗಳಿನಲ್ಲಿ ಭಗಿನಿಯರು ಆ ಮನೆಗೆ ಕಾಲಿರಿಸುತ್ತಾರೆ. ಭಗಿನಿಯರ ತಂದೆತಾಯಿಗಳ ಒಪ್ಪಿಗೆ ಮತ್ತು ಆಶೀರ್ವಾದದೊಂದಿಗೆ ಅಧಿಕೃತವಾಗಿ 16 ಜುಲೈ 1921ರ ಮೌಂಟ್

ಕಾರ್ಮೆಲ್ ಮಾತೆಯ ಹಬ್ಬದ ದಿನದಂದು ಬೆಥನಿ ಸಂಸ್ಥೆಯು ಆರಂಭಗೊಳ್ಳುತ್ತದೆ. ರೇಮಂಡರು ಕಟ್ಟಿದ ಬೆಂದೂರಿನ ಸೆಬಾಸ್ಟಿಯನ್ ಚರ್ಚ್ 1930ರಲ್ಲಿ ಉದ್ಘಾಟನೆಗೊಂಡಾಗ ಮಾತೆ ಮರಿಯಮ್ಮನವರ ಮೂರ್ತಿಯ ಎದುರು ಮೊಣಕಾಲೂರಿ ಪ್ರಾರ್ಥಿಸುವಾಗ ನಾಲ್ಕು ಸಹೋದರಿಯರನ್ನು ಆಕೆಯ ಹಾರೈಕೆಗೆ ಸಮರ್ಪಿಸಿದರು. ಮಾತೆ ಮರಿಯಮ್ಮರವರಲ್ಲಿ ವಿಶೇಷ ಭಕ್ತಿ ಮತ್ತು ಶ್ರದ್ಧೆಯನ್ನು ರೇಮಂಡರು ಹೊಂದಿದ್ದರು. "ಎಲ್ಲಾ ಕ್ರಿಸ್ತನಿಗಾಗಿ ಎಲ್ಲವೂ ಮಾತೆ ಮೇರಿಯವರ ಮಧ್ಯಸ್ಥಿಕೆಯಿಂದಾಗಿ ಅವೆಲ್ಲವೂ ಯೇಸುವಿಗೋಸ್ಕರವಾಗಿ" ಎನ್ನುವುದು ರೇಮಂಡರ ಧ್ಯೇಯವಾಕ್ಯವಾಗಿತ್ತು. ಎಲ್ಲಾ ಮಹಾಪುರುಷರ ಜೀವಿತವನ್ನು ಗಮನಿಸಿದಾಗ ಅವರ ಜೀವಿತದಲ್ಲಿ ಬರುವ ಕಷ್ಟಗಳನ್ನು ಸಹನೆಯಿಂದ ದೈವಭಕ್ತಿಯಿಂದ ಎದುರಿಸಬೇಕೆಂಬ ನಿರೂಪಣೆ ಅರ್ಥಪೂರ್ಣವಾಗಿದೆ.

ಅದೇ ಅಧ್ಯಾಯದಲ್ಲಿ ಭಗನಿಯರು ತೆಗೆದುಕೊಂಡ ವ್ರತಗಳು, ಸಂಸ್ಥೆಯ ಆರಂಭದಲ್ಲಿ ಪ್ರೋತ್ಸಾಹ ಮತ್ತು ನಿಂದನೆಗಳ ಮಧ್ಯೆ ಬೆಥನಿ ಸಂಸ್ಥೆ ಕವಲೊಡೆಯಿತು. ಈ ರೀತಿ ಅನೇಕ ಕಷ್ಟ ಸಂಕಟಗಳ ಮಧ್ಯೆಯೂ ಸಂಸ್ಥೆಯು ಬೆಳೆದು ಅರಳಿ ನಿಂತ ರೀತಿ ಅಪೂರ್ವ ಶಕ್ತಿಯ ಫಲ. ಆದರ್ಶ ಬದುಕು ಮತ್ತು ಭಗವಂತನ ಕೃಪೆ ಇವು ಯಾವುದೇ ಸಂಸ್ಥೆಯ ಅಥವಾ ವ್ಯಕ್ತಿಗಳ ಬದುಕು ಸಾರ್ಥಕವಾಗಿಸುವ ಚೈತನ್ಯಗಳು. ಹೀಗೆ ಸಂಸ್ಥೆಯ ಏಳುಬೀಳುಗಳು, ನಡೆದು ಬಂದ ದಾರಿಯನ್ನು ಮಾರ್ಮಿಕವಾಗಿ ಲೇಖಕರು ಅಭಿವ್ಯಕ್ತಪಡಿಸಿದ್ದಾರೆ.

ಈ ಎಲ್ಲಾ ಕೆಲಸ ಕಾರ್ಯಗಳ ಮಧ್ಯೆಯೂ ರೇಮಂಡರು 'ಇಮಿಟೇಶನ್ ಆಫ್ ಮೇರಿ' (Imitation of Mary) ಮತ್ತು ಬೈಬಲ್‌ನ ನಾಲ್ಕು ಸುವಾರ್ತೆಗಳನ್ನು ಕೊಂಕಣಿಗೆ 1949ರಲ್ಲಿ ಭಾಷಾಂತರಿಸಿದರು. ಭಗಿನಿಯರು ನಿಜವಾದ ಭಕ್ತಿ ಮತ್ತು ಸೇವೆಯಲ್ಲಿ ತೊಡಗಲು ಬೇಕಾದ ಆದರ್ಶಯುತ ವ್ಯಕ್ತಿತ್ವ ರೂಪಿಸಲು ಅನೇಕ ಯೋಜನೆಗಳನ್ನು ಹಾಕಿಕೊಂಡರು. ಅಷ್ಟೇ ಅಲ್ಲದೆ 1954ರಲ್ಲಿ ಬೈಬಲ್‌ನ ಹಳೆ ಒಡಂಬಡಿಕೆ ಪುಸ್ತಕವನ್ನು ಕೊಂಕಣಿ ಭಾಷೆಗೆ ಭಾಷಾಂತರಿಸಿದರು. ಅನೇಕ ಲೇಖನಗಳನ್ನು ಪ್ರಕಟಿಸಿದರು. ಹಾಡುಗಳನ್ನು ಮತ್ತು ಪ್ರಾರ್ಥನೆಗೆ ಅಗತ್ಯವಿರುವ ಪ್ರಮುಖ ಘಟಕಗಳನ್ನು ಕೊಂಕಣಿಗೆ ಭಾಷಾಂತರಿಸಿದರು. ದೇವರ ಜ್ಞಾನ, ಆದರ್ಶಯುತ ಜ್ಞಾನ, ಶಿಸ್ತುಬದ್ಧ ಮಾರ್ಗವು ಪ್ರತಿಯೊಬ್ಬ ವ್ಯಕ್ತಿಗೂ ಸರಳವಾಗಿ ಸಿಗಬೇಕೆನ್ನುವ ದೃಷ್ಟಿಯಲ್ಲಿ ಅನೇಕ ಕೆಲಸಗಳ ನಡುವೆಯೂ ಸಾಹಿತ್ಯ, ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಗೆ ಮಹತ್ವ ಕೊಟ್ಟರು. ಹೀಗೆ ರೇಮಂಡರು ಮಾಡಿದ ಆಧ್ಯಾತ್ಮಿಕ, ಸಾಹಿತಿಕ ಹಾಗೂ ಶೈಕ್ಷಣಿಕ ಸೇವೆಗಾಗಿ ರೋಮ್‌ನಿಂದ 'ಡೊಮೆಸ್ಟಿಕ್ ಪ್ರಿಲೇಟ್' ಎಂಬ ಪ್ರಶಸ್ತಿಯನ್ನು ಪೋಪ್ ಪಯಸ್ XII (Pius XII) ರಿಂದ ಪಡೆದರು.

ಸಂಸ್ಥೆಯನ್ನು ನಡೆಸುವ ಮಹತ್ತರ ಹುದ್ದೆಗೆ ಆಯ್ಕೆ ಮಾಡುವ ಹಾಗೂ ಸಂಸ್ಥೆಯ ಮಹತ್ವದ ಅಂಶಗಳನ್ನು, ಅನೇಕ ನಿರ್ಣಯಗಳನ್ನು ಮಂಡಿಸಿದರು. 'ಮಹಾಮಂಡಳಿ'ಯ ಮೂರು, ನಾಲ್ಕು ಹಾಗೂ ಐದನೇ ಜನರಲ್ ಚಾಪ್ಟರ್‌ಗಳಲ್ಲಿ

ಕಿರುವರದಿ ಹಾಗೂ ಆಯ್ಕೆಗೊಂಡವರ ಹೆಸರನ್ನು ಸೂಚಿಸಿದ್ದಾರೆ. 5ನೇ ಮಹಾಮಾತೆ ಮದರ್ ಮಕ್ರೀನಾರವರು 1960ರಲ್ಲಿ ಆಯ್ಕೆಗೊಂಡಾಗ 84 ವರ್ಷದ ಬೆಥನಿ ಸ್ಥಾಪಕ ರೇಮಂಡರನ್ನು ಅವರ ಕಾಟೇಜ್ (Cottage – ವಾಸಿಸುವ ಸ್ಥಳ) ನಲ್ಲಿ ಭೇಟಿಯಾಗಿ ಆಶೀರ್ವಾದ ಪಡೆದರು. ಆ ಸಂದರ್ಭದಲ್ಲಿ ನಿರಂತರ ಪರಮಪ್ರಸಾದದ ಆರಾಧನೆಯನ್ನು ಕನ್ಯಾಮಠದಲ್ಲಿ ಸ್ಥಾಪಿಸುವಂತೆ ಕೇಳಿಕೊಂಡರು. ಇದು ರೇಮಂಡರಿಗೆ ಪರಮ ಪ್ರಸಾದದ ಆರಾಧನೆಯಲ್ಲಿದ್ದ ಅಗಮ್ಯ ಪ್ರೀತಿಯನ್ನು ಬಿಂಬಿಸುತ್ತದೆ. ಮಹಾಮಾತೆ ಮದರ್ ಮಕ್ರೀನಾರವರು ಹೇಳಿದಂತೆ: "ಪ್ರಕಾಶಮಾನವಾದ ಬೆಳಕು ಮರೆಯಾಯಿತು ಮತ್ತು ಕತ್ತಲೆಯು ಬೆಥನಿಯನ್ನು ಆವರಿಸಿತು. ಆ ಕತ್ತಲೆಯ ಕ್ಷಣದಲ್ಲಿ ನಾನು ಅವನ ನಿರ್ಜೀವ ದೇಹವನ್ನು ದಿಗ್ಭ್ರಮೆಯಿಂದ ನೋಡಿದೆ. ಆಗ ಮಹಾ ಆಧ್ಯಾತ್ಮಿಕ ಜಲಾಶಯದಿಂದ ಹರಿದ ಜೀವಜಲ ನನ್ನನ್ನು ಪುನರುಜ್ಜೀವನಗೊಳಿಸಿತು. ನಂತರ ಅವರ ಸೇವೆಯನ್ನು ಮುಂದುವರಿಸುವ ಶಕ್ತಿ ಪಡೆದೆ" (ಸುಪೀರಿಯರ್ ಜನರಲ್ 1959–1977). ನಂತರ ಅವರ ಶರೀರವನ್ನು ಜನರ ಅಪೇಕ್ಷೆಯ ಮೇರೆಗೆ ಬೆಂದೂರಿನ ದೇವಾಲಯದ ಪೀಠದ ಮುಂಭಾಗದಲ್ಲಿ ಭೂಸ್ಥಾಪನೆ ಮಾಡಲಾಯಿತು.

**ಬೆಂದೂರು ಧರ್ಮಕೇಂದ್ರ – ಬೆಥನಿಯ ತೊಟ್ಟಿಲು**

1914 ರಿಂದ 1931 ರವರೆಗೆ ಬೆಂದೂರಿನ ಧರ್ಮಕೇಂದ್ರ ಧರ್ಮಗುರುಗಳಾಗಿ ಅವರ ಕೊಡುಗೆಗಳು ಮತ್ತು ಸಾಧನೆಗಳನ್ನು ಮಾರ್ಮಿಕವಾಗಿ ಲೇಖಕರು ಚಿತ್ರಿಸಿದ್ದಾರೆ. ರೇಮಂಡರು ಧರ್ಮಕೇಂದ್ರದ ಅಭಿವೃದ್ಧಿಗೆ ತೆಗೆದುಕೊಂಡ ಆಧ್ಯಾತ್ಮಿಕ ಕಾರ್ಯಕ್ರಮಗಳು, ಸೇಂಟ್ ಆಗ್ನೆಸ್ ಶಾಲೆಯು ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆರಂಭಗೊಂಡು ಪ್ರಾಥಮಿಕ, ಪ್ರೌಢಶಾಲೆ ಹಾಗೂ ಕಾಲೇಜುಗಳ ಮೂಲಕ ಅಭಿವೃದ್ಧಿ, ಸಮಾಧಿಯ ಸ್ಥಳದ ಖರೀದಿ ಮತ್ತು ದೇವಾಲಯ ನಿರ್ಮಾಣಕ್ಕಾಗಿ ಬುನಾದಿ, ಮಾರ್ಗರೇಟ್ ಶಾಲೆಯ ಸ್ಥಾಪನೆ ಮತ್ತು ಸೇಂಟ್ ಸಬಾಸ್ಟಿಯನ್ ಶಾಲೆಗಳ ಸ್ಥಾಪನೆ, ಕಂಕನಾಡಿಯಲ್ಲಿ ಸಂತ ಜೋಸೆಫರ ಶಾಲೆಯ ಸ್ಥಾಪನೆ, ಅವುಗಳೊಂದಿಗೆ ಫಾ॥ ಮುಲ್ಲರ್ಸ್ ಆಸ್ಪತ್ರೆ ಮತ್ತು ಕ್ಲೋಯಿಸ್ಟರ್ ಕಾರ್ಮೆಲ್ ಕಾನ್ವೆಂಟ್ ಮಠ ಇವೆಲ್ಲವೂ ಜನರ ಶೈಕ್ಷಣಿಕ, ಆಧ್ಯಾತ್ಮಿಕ ಮತ್ತು ಶಾರೀರಿಕ ಆರೋಗ್ಯದ ಚಿಕಿತ್ಸೆಯ ಕೇಂದ್ರಗಳಾಗಿ ಜನರ ಅಗತ್ಯಗಳನ್ನು ಪೂರೈಸಿದವು.

ನಂತರ ಅವರನ್ನು ಧರ್ಮಪ್ರಾಂತ್ಯದ ಸಲಹೆಗಾರರನ್ನಾಗಿ, ವಿಕರ್ ಜನರಲ್ ಆಗಿ ನೇಮಕ ಮಾಡಲಾಯಿತು. ಅದರೊಂದಿಗೆ ಧರ್ಮಪ್ರಾಂತ್ಯದ ಅನೇಕ ಜವಾಬ್ದಾರಿಗಳನ್ನು ಹೊತ್ತರು. ಮದ್ರಾಸಿನ ಕ್ಯಾಥೋಲಿಕ್ ವಿದ್ಯಾಮಂಡಳಿಯ ಸದಸ್ಯರಾಗಿ ಭಾರತದ ಶೈಕ್ಷಣಿಕ ಕ್ಷೇತ್ರದಲ್ಲಿ ಸಲಹೆ ನೀಡಿ ತಮ್ಮ ಛಾಪು ಮೂಡಿಸಿದ್ದರು. ಭಾರತದ ಸೈಮನ್ ಕಮಿಷನ್ ತನ್ನ ಕಾರ್ಯ ಆರಂಭಿಸಿದಾಗ ರೇಮಂಡರು ಕ್ಯಾಥೋಲಿಕ್ ನಿಯೋಜನೆಯ ಪ್ರಮುಖ ವ್ಯಕ್ತಿಯಾಗಿದ್ದರು.

ಅವರು ಉತ್ತಮ ವಾಗ್ಮಿಯೂ ಮತ್ತು ಪ್ರಬೋಧಕರಾಗಿದ್ದರು. ಅಷ್ಟೇ ಅಲ್ಲದೆ

ದಕ್ಷಿಣ ಕೆನರಾದ ಜಿಲ್ಲಾ ಶೈಕ್ಷಣಿಕ ಮಂಡಳಿಯ ಕೌನ್ಸಿಲರ್ ಆಗಿ ಆಯ್ಕೆಗೊಂಡರು. ಆ ಸಂದರ್ಭದಲ್ಲಿ ಬಡವರ ಅನೇಕ ಅಗತ್ಯಗಳನ್ನು ಪೂರೈಸಿದರು. ಆ ಕಾಲದ ಜನರ ಸಮಸ್ಯೆ ಮತ್ತು ಬೇಡಿಕೆಗಳನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟ ರೀತಿ ಪ್ರಶಂಸನೀಯ. ಅದರ ಪರಿಣಾಮವಾಗಿ ಸರ್ಕಾರವು 1929 ರಲ್ಲಿ ಕಥೋಲಿಕ ಶಾಲೆಗಳಿಗೆ 'ಮ್ಯಾಗ್ನಾ ಕಾರ್ಟಾ' (Magna Carta) ಅರ್ಹತೆಯನ್ನು ಶಿಫಾರಸ್ಸು ಮಾಡಿತು. ಸೈಮನ್ ಕಮಿಷನ್ ಮದ್ರಾಸ್‌ನಲ್ಲಿ ಭೇಟಿಯಾದಾಗ ದಕ್ಷಿಣ ಕನ್ನಡದ ಕ್ಯಾಥೋಲಿಕ್ ಒಕ್ಕೂಟದ ಪ್ರತಿನಿಧಿಯಾಗಿದ್ದರು. ಇದು ರೇಮಂಡರ ಬಹುಮುಖ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಕೈಮಗ್ಗ, ಹೂ ತಯಾರಿಕೆ ಮತ್ತು ಮಾರ್ತಾ ಇಂಡಸ್ಟ್ರಿಯಲ್ ಸ್ಕೂಲ್, ಕೈಮಗ್ಗ ಜೋಸೆಫ್ ಇಂಡಸ್ಟ್ರಿಯಲ್ ಸ್ಕೂಲ್, ಸೊಸೈಟಿ ಆಫ್ ವಿನ್ಸೆಂಟ್ ದಿ ಪಾಲ್ ಇವುಗಳ ಮುಖಾಂತರ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿ ಆರ್ಥಿಕ ಮಟ್ಟವನ್ನು ಉನ್ನತೀಕರಿಸಲು ಪ್ರಯತ್ನಿಸಿದರು. ನಂತರ ಬಳ್ಕುಂಜೆ, ಬಜ್ಪೆ, ಕಿನ್ನಿಗೋಳ, ಪೆದ್ಮನೂರುಗಳಲ್ಲಿ ಶಾಲೆಗಳನ್ನು ಹಾಗೂ ಮೇರಿಸಿಲ್‌ನಲ್ಲಿ ಅನಾಥಾಶ್ರಮವನ್ನು ತೆರೆದರು.

**ಮಂಗಳೂರು ಧರ್ಮಕೇಂದ್ರದ ವಿಕರ್ ಜನರಲ್ (1931–1942)**

ದಕ್ಷ ಆಡಳಿತಗಾರರಾದ ರೇಮಂಡರು ತಮ್ಮ ಮೇರು ವ್ಯಕ್ತಿತ್ವದಿಂದಾಗಿ ವಿಕರ್ ಜನರಲ್ ಆಗಿ ಧರ್ಮ ಪ್ರಾಂತ್ಯದ ಅನೇಕ ಜವಾಬ್ದಾರಿಗಳನ್ನು ಬಿಷಪ್‌ರವರ ನೇತೃತ್ವದಲ್ಲಿ ನಿಭಾಯಿಸಿದರು. 1914 ಅವರು ದಕ್ಷಿಣ ಕೆನರಾದ ಕ್ಯಾಥೋಲಿಕ್ ಸಂಘದ ಅಧ್ಯಕ್ಷರಾಗಿ ನೇಮಕಗೊಂಡು ಬಿಷಪ್ ಪೆರಿನಿ ಯೇಸು ಸಭೆಯವರ ಶ್ರಮದೊಂದಿಗೆ ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಮನದಣಿಯೆ ದುಡಿದರು. 1931 ಅಕ್ಟೋಬರ್ 24 ರಂದು ಧರ್ಮಪ್ರಾಂತ್ಯದ ಆಡಳಿತ ಅಧಿಕಾರಿಗಳಲ್ಲಿ ಒಬ್ಬರಾಗಿ ಪ್ರಾಥಮಿಕ, ಪ್ರೌಢಶಾಲೆಗಳ ಮತ್ತು ಧರ್ಮಪ್ರಾಂತ್ಯದ ಆಸ್ತಿ ಪಾಸ್ತಿ, ಲೆಕ್ಕಪತ್ರ, ಕಟ್ಟಡಗಳ ಮೇಲ್ವಿಚಾರಕರಾಗಿ ಆಯ್ಕೆಗೊಂಡರು. ಹೀಗೆ ಹತ್ತು ಹಲವಾರು ಸಂಘ, ಸಂಸ್ಥೆಗಳ ಜವಾಬ್ದಾರಿಗಳನ್ನು ಹೊತ್ತು ನಿಭಾಯಿಸಿದರು.

ರೇಮಂಡರು ಒಬ್ಬ ಉತ್ತಮ ಕೆಲಸಗಾರ, ಶ್ರಮಜೀವಿ ಮತ್ತು ಪ್ರಾಮಾಣಿಕ ವ್ಯಕ್ತಿ ಎಂಬುದನ್ನು ಅವರ ಬದುಕಿನ ಹಲವು ಘಟನೆ ಮತ್ತು ಸಾಧನೆಯ ಮೈಲುಗಲ್ಲುಗಳನ್ನು ನೆನಪಿಸುತ್ತಾ ಓದುಗರನ್ನು ಅವರ ಸಾಧನೆಗೆ ಪ್ರೇರೇಪಿಸುತ್ತವೆ. CASK (Catholic Association of South Kanara) 1927 ರಿಂದ 'ಮಂಗಳೂರು' ಎನ್ನುವ ಶೀರ್ಷಿಕೆಯಡಿ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಅನೇಕ ವರ್ಷ ರೇಮಂಡರು ಈ ಸಂಘದ ಅಧ್ಯಕ್ಷರಾಗಿದ್ದರು. ರೇಮಂಡರ ಜುಬಿಲಿಯ ಸಂದರ್ಭದಲ್ಲಿ ಅವರ ಸಾಧನೆಯ ಕುರಿತು ಈ ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.

**ಮುಕ್ತಾಯ:**

ರೇಮಂಡರು ಮಾಡಿದ ಸಾಧನೆಗಳು ಒಂದಲ್ಲ ಎರಡಲ್ಲ ನೂರೆಂಟು. ಆ ಜವಾಬ್ದಾರಿಗಳ ಮಧ್ಯೆ ದಯೆ, ಪ್ರೀತಿ, ಅನುಕಂಪ ಹಾಗೂ ಮಾನವೀಯ ಮೌಲ್ಯಗಳ ಪ್ರತೀಕವಾಗಿದ್ದರು. ಬಹುಮುಖ್ಯವಾಗಿ ಧಾರವಾಡ, ಶಾಂತಿಬಸ್ತವಾಡ, ಗುಲೇದಗುಡ್ಡ, ಗಾಡೇನಹಳ್ಳಿ, ಡೋರ್ನಹಳ್ಳಿ ಮುಂತಾದ ಹಲವು ಹಳ್ಳಿಗಾಡು ಪ್ರದೇಶಗಳಲ್ಲಿ ಶಾಲೆ, ಸೇವಾಕೇಂದ್ರ ಮತ್ತು ಆರೋಗ್ಯ ಕೇಂದ್ರಗಳನ್ನು ತೆರೆದು ಸಾವಿರಾರು ಮಕ್ಕಳ, ಕುಟುಂಬದ ಜ್ಞಾನದ ದೀವಿಗೆ ಹಚ್ಚಿದರು. ಮನ ನೊಂದವರನ್ನು ಸಂತೈಸಿ ರೋಗಿಗಳನ್ನು ಗುಣಪಡಿಸಿದರು. ಈ ಎಲ್ಲಾ ಕೆಲಸ ಕಾರ್ಯಗಳು, ಒಬ್ಬ ಸಂತನಿಗೆ ಮಾತ್ರ ಸಾಧ್ಯ. ಸಮತೋಲನ ವ್ಯಕ್ತಿತ್ವವುಳ್ಳ ಅನೇಕ ಕಷ್ಟಕೋಟಲೆಗಳನ್ನು ಎದುರಿಸಿದ ದೃಢ ಸಂಕಲ್ಪ, ಇಚ್ಛಾಶಕ್ತಿ ಮತ್ತು ದೈವಬಲ ಹೊಂದಿದ ವ್ಯಕ್ತಿ ಇಡೀ ಸಮಾಜವನ್ನು ರೂಪಾಂತರ ಗೊಳಿಸಲು ಸಾಧ್ಯ.

ಇಂದು ಅವರು ಹುಟ್ಟು ಹಾಕಿದ ಬೆಥನಿ ವಿದ್ಯಾಸಂಸ್ಥೆಗಳು ಸಹಸ್ರಾರು ವಿದ್ಯಾರ್ಥಿಗಳಿಗೆ ಜ್ಞಾನದ ಆಗರವಾಗಿವೆ. ಒಂದು ಸೂರ್ಯ ಇಡೀ ಜಗತ್ತನ್ನು ಬೆಳಗಿದ ಹಾಗೆ ಮೇರು ವ್ಯಕ್ತಿತ್ವವು ಹಲವರ ಬದುಕನ್ನು ಅರಳಿಸಿ ಜಗತ್ತಿನ ಒಳಿತಿಗೆ ಕಾರಣವಾಗಬಲ್ಲದು. ಈ ನಿಟ್ಟಿನಲ್ಲಿ ರೇಮಂಡರ ಜೀವನ, ವ್ಯಕ್ತಿತ್ವ ಹಾಗೂ ಸಾಧನೆಗಳು ಇಂದಿನ ಪೀಳಿಗೆಗೆ ಮಾದರಿಯಾಗಿವೆ.

## ಪರಾಮರ್ಶನ ಗ್ರಂಥಗಳು:


1. Unless the Seed Die–A Brief Sketch of the Life of Mgr Raymond FC Mascarenhas by Dr. Sr. M. Violette D'Souza, BS, 1985 & 1996. Bethany Publication.
2. From the Lips of the Founder by Sr. Bertha, BS, (Hand written Manuscript) (Instruction and Exhortations by the Founder to the Bethany Community from 6.7.1940–1943) & 1996. Bethany Publication.
3. Bethany My Joy and My Crown–My Memories of Mgr RFC Mascarenhas by Sr. M. Esperie, BS, Bethany Publications, Mangalore, 2003.
4. Mgr Raymond A Mystic and a Prophet, Sr M Bertha, BS, (Personality and Prophetic Vision of Mgr Ray–mond Francis Camillus Mascarenhas) 2007 & 2009 Bethany Publication.
5. Reminiscences, Memories of the Servant of God Raymond FC Mascarenhas, Founder of the Congrega–tion of the Sisters of the Little Flower of Bethany, Sr M Theresine, BS & Sr M Esuria, BS, Bethany Publi–cations, 2009.
6. First Mangalorean Servant of God Raymond FC Mascarenhas, A Brief Biographical Sketch 50th Death Anniversary (December 23, 1960 – December 23, 2010) by Sr M Lillis, BS, 2010, Bethany publication.
7. If Only I knew.....Encounter with Mgr RFC Mascarenhas, by James D'soza, Asian Trading cooperation, Bangalore, 2012.
8. To you My Daughters, Letters of Mgr RFC Mascarenhas, Sr Lillis and Sr Mirium, BS, Asian Trading Cor–poration, Bangalore, 2013.
9. Thus He Preached to Them, A collection of Homilies and Reflections of Servant of God–Mgr. RFC Masca–renhas, Edited by Fr Ronald Serrao, ATC Bangalore.
10. The Vine that He Planted....A Brief History of the Congregation of the Sisters of the Little Flower of Bethany, Mangalore, 1995, Bethany Publication.